ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು

ಗುಂಡ್ಲುಪೇಟೆ – 571111

## 37ನೇ ಗೌರ್ನಿಂಗ್ ಕೌನ್ಸಿಲ್ ಸಭೆ

## ಕಾರ್ಯಸೂಚಿ ಮತ್ತು ಟಿಪ್ಪಣಿಗಳು

27.08.2022

## ದಿನಾಂಕ: 27.08.2022 ರಂದು ನಡೆಯುವ 37ನೇ ಗೌರ್ನಿಂಗ್ ಕೌನ್ಸಿಲ್ ಸಭೆ

## ಕಾರ್ಯಸೂಚಿ


| ಕ್ರ. ಸಂ. | ಪರಿವಿಡಿ | ಪುಟ ಸಂಖ್ಯೆ |
|---|---|---|
| 37.1 | ಸ್ವಾಗತ | 1 |
| 37.2 | ಹಿಂದಿನ ಸಭೆಯ ನಡಾವಳಿಗಳನ್ನು ಅನುಮೋದಿಸುವುದು (ಅನುಬಂಧ-1) | 1 |
| 37.3 | ಹಿಂದಿನ ಸಭೆ ನಡಾವಳಿಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ | 1 |
| | ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ನಡೆಸುವ ಬಗ್ಗೆ | 1 |
| | ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುವ ಬಿಸಿಎಂ ವಿದ್ಯಾರ್ಥಿಗಳ ಶುಲ್ಕ | 1-2 |
| | ಪದವಿ ಫಲಿತಾಂಶ ಉತ್ತಮಪಡಿಸುವುದು | 2-3 |
| | ಪೋಷಕರ ಸಭೆ | 3 |
| | ಗ್ರಂಥಾಲಯದಲ್ಲಿರುವ ಪುಸ್ತಕಗಳು, ನಿಯತಕಾಲಿಕೆಗಳು ಹಾಗೂ ದಿನ ಪತ್ರಿಕೆಗಳ ಮಾಹಿತಿ | 3-4 |
| | ಕಾರ್ಯಗಾರ/ಸೆಮಿನಾರ್‌ಗಳಲ್ಲಿ ಅಧ್ಯಾಪಕರು ಪ್ರಬಂಧ ಮಂಡಿಸಿರುವ ಮಾಹಿತಿ | 4 |
| | ಕಾಲೇಜಿನ ಪ್ರಗತಿ ಪರಿಶೀಲನೆ | 4 |
| (ಅ) | ಅಧ್ಯಾಪಕರುಗಳು ಪ್ರಬಂಧ ಮಂಡಿಸಿರುವ ವಿವರಗಳು | 5 |
| (ಆ) | ವಿಚಾರ ಸಂಕಿರಣ/ಕಾರ್ಯಾಗಾರ/ಸಮ್ಮೇಳನ/ವೆಬಿನಾರ್‌ಗಳಲ್ಲಿ ಅಧ್ಯಾಪಕರುಗಳು ಭಾಗವಹಿಸಿರುವ ಮಾಹಿತಿ | 5 |
| (ಇ) | ವಿಶೇಷ ಉಪನ್ಯಾಸ ಕಾರ್ಯಕ್ರಮಗಳ ಮಾಹಿತಿ | 5-6 |
| (ಈ) | ಅಧ್ಯಾಪಕರ ಸಾಧನೆ | 6 |
| (ಉ) | ವಿದ್ಯಾರ್ಥಿಗಳ ಸಾಧನೆ | 6 |
| | 1. ರಾಷ್ಟ್ರೀಯ ಹಬ್ಬಗಳು | 7 |
| | 2. ರಾಷ್ಟ್ರೀಯ ಸೇವಾ ಯೋಜನೆ | 7 |
| | 3. ಇತರೆ ಕಾರ್ಯಕ್ರಮಗಳು | 7-8 |
| ಅನುಬಂಧ-2 | 2021-22 ಮತ್ತು 2022-23ನೇ ಸಾಲಿನ ದಾಖಲಾತಿ ವಿವರ | 9 |
| ಅನುಬಂಧ-3 | ಗ್ರಂಥಾಲಯ ಪುಸ್ತಕಗಳ ಮಾಹಿತಿ | 10-11 |
| ಅನುಬಂಧ-4 | ಪದವಿ ಫಲಿತಾಂಶ ವಿವರ | 12-13 |
| | ವಿವಿಧ ಕಾರ್ಯಕ್ರಮಗಳ ಫೋಟೋಗಳು | 14-16 |

# ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ

## ದಿನಾಂಕ: 27.08.2022 ರಂದು ನಡೆಯಲಿರುವ 37ನೇ ಗೌರ್ನಿಂಗ್ ಕೌನ್ಸಿಲ್ ಸಭೆಯ ಕಾರ್ಯಸೂಚಿ, ಟಿಪ್ಪಣಿ ಹಾಗೂ ಅನುಪಾಲನಾ ವರದಿ

37.1 ಸ್ವಾಗತ

**37.2 ಹಿಂದಿನ ಸಭೆಯ ನಡಾವಳಿಗಳನ್ನು ಅನುಮೋದಿಸುವುದು**

ದಿನಾಂಕ: 28.03.2022ರಂದು ನಡೆದ 36ನೇ ಗೌರ್ನಿಂಗ್ ಕೌನ್ಸಿಲ್ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರುಗಳಿಗೆ ದಿನಾಂಕ: 19.04.2022ರಂದು ಕಳುಹಿಸಲಾಗಿದೆ. ಯಾವುದೇ ತಿದ್ದುಪಡಿ ಸೂಚನೆ ಬಂದಿರುವುದಿಲ್ಲ. ಆದ್ದರಿಂದ ಅನುಮೋದನೆಗೆ ಮಂಡಿಸಿದೆ. (ಹಿಂದಿನ ಸಭೆಯ ನಡಾವಳಿ ಅನುಬಂಧ-1)

**37.3 ಹಿಂದಿನ ಸಭೆಯ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆ**

**34.3, 35.3, 36.3: ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ನಡೆಸುವುದು**

**ಹಿಂದಿನ ಸಭೆಯ ತೀರ್ಮಾನ**

ವಿದ್ಯಾರ್ಥಿಗಳಿಂದ ತುರ್ತಾಗಿ ಶುಲ್ಕ ವಸೂಲಿ ಮಾಡಿ ತರಗತಿಗಳನ್ನು ನಡೆಸಲು ಯೋಜನೆ ರೂಪಿಸಿಕೊಂಡು ಸಮಯದ ಮಿತಿಯೊಳಗೆ ತರಗತಿಗಳನ್ನು ನಡೆಸಲು ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠದವರು ಸಲಹೆ ನೀಡಿದರು. ಉಳಿಕೆ 102 ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಿ ತರ್ತಾಗಿ ಮುಂದಿನ ಸೆಮಿಸ್ಟರ್‌ನಲ್ಲಿ ತರಗತಿಗಳನ್ನು ನಡೆಸಲು ಸಭೆ ತೀರ್ಮಾನಿಸಿತು.

**ತೆಗೆದುಕೊಂಡಿರುವ ಕ್ರಮಗಳು**

2021-22ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸಲು ಆಡಳಿತ ಮಂಡಳಿಯಿಂದ ಅನುಮತಿ ಪಡೆಯಲಾಗಿದ್ದು, ಸದರಿ ಕೋರ್ಸ್‌ಗೆ ಪ್ರಥಮ ಬಿ.ಕಾಂ 95 ಹಾಗೂ ಪ್ರಥಮ ಬಿ.ಎ 54 ಒಟ್ಟು 149 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ದಿನಾಂಕ: 01.06.2022 ರಿಂದ 31.08.2022 ರವರೆಗೆ (3 ತಿಂಗಳು) ಬಿ.ಕಾಂ 3 ಹಾಗೂ ಬಿ.ಎ ತರಗತಿಯಲ್ಲಿ 2 ಒಟ್ಟು 5 ಬ್ಯಾಚ್‌ಗಳನ್ನು ಮಾಡಿಕೊಂಡು ನಿಗದಿತ ವೇಳಾಪಟ್ಟಿಯಂತೆ ತರಗತಿಗಳನ್ನು ನಡೆಸಲಾಗುತ್ತಿದೆ.

**34.4, 35.4, 36.4: ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುವ ಬಿಸಿಎಂ ವಿದ್ಯಾರ್ಥಿಗಳ ಶುಲ್ಕ**

**ಹಿಂದಿನ ಸಭೆಯ ತೀರ್ಮಾನ**

- ಪ್ರಸಕ್ತ ಸಾಲಿನಲ್ಲಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು 31 ಮಾರ್ಚ್ 2022 ಕಡೆಯ ದಿನವಾಗಿದೆ. ತುರ್ತಾಗಿ ಕ್ರಮವಹಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಶುಲ್ಕ ಮರುಭರಿಕೆಯಾಗಲು ಅನುಕೂಲ ಮಾಡಿಕೊಡಬೇಕೆಂದು ನಿರ್ದೇಶಕರು ತಿಳಿಸಿದರು.
- ಎಲ್ಲಾ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಶುಲ್ಕ ಮಂಜೂರು ಮಾಡಿಸಿ ಆರ್ಥಿಕ ಅನುಕೂಲವನ್ನು ಕಾಲೇಜಿನಿಂದ ಮಾಡಿಕೊಡಲು ಕ್ರಮವಹಿಸಲು ನಿರ್ದೇಶಕರು ತಿಳಿಸಿದರು.
- ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುತ್ತಿರುವ ಹಿನ್ನಲೆ ನಿಮಗೆ ತಿಳಿದಿದೆ. ಸದರಿ ವಿಷಯದ ಬಗ್ಗೆ ಮಾರ್ಗದರ್ಶನ ನೀಡಿ ಎಲ್ಲರಿಗೂ ಶುಲ್ಕ ಮರುಭರಿಕೆ ಮಾಡಿಸಲು ಕಡ್ಡಾಯವಾಗಿ ಅಧ್ಯಾಪಕರುಗಳನ್ನು ನಿಯೋಜಿಸಿ ಕ್ರಮವಹಿಸಲು ನಿರ್ದೇಶಕರು ಸಲಹೆ ನೀಡಿದರು.
- ವಿದ್ಯಾರ್ಥಿಗಳಿಂದ ಆಗುವ ತಪ್ಪುಗಳಾದ ಆಧಾರ್, ಮೊಬೈಲ್ ನಂಬರ್ ಬದಲಾಯಿಸದಂತೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಬೇಕೆಂದು ಸೂಚಿಸಿದರು. ಹಾಗೂ ಸದರಿ ಕೆಲಸಗಳನ್ನು Followup ಮಾಡಲು ಡಾ. ಹೆಚ್.ಎಸ್ ನಾಗೇಂದ್ರಸ್ವಾಮಿಯವರು ಸಲಹೆ ನೀಡಿದರು.

ತೆಗೆದುಕೊಂಡಿರುವ ಕ್ರಮಗಳು

- 2021-22ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 375 ಅರ್ಹ ಬಿ.ಸಿ.ಎಂ. ವಿದ್ಯಾರ್ಥಿಗಳಲ್ಲಿ 285 ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಇವರಲ್ಲಿ 280 ವಿದ್ಯಾರ್ಥಿಗಳಿಗೆ ಶುಲ್ಕವು ಸರ್ಕಾರದಿಂದ ಆನ್‌ಲೈನ್ ಮುಖಾಂತರ ಉಳಿತಾಯ ಖಾತೆಗಳಿಗೆ ಜಮೆ ಆಗಿರುತ್ತದೆ.
- ಪ್ರಕಟಣೆ ಮುಖಾಂತರ ಶುಲ್ಕ ಮರುಭರಿಕೆಗೆ ಅರ್ಜಿ ಸಲ್ಲಿಸಲು ದಿನಾಂಕ ನಿಗದಿಮಾಡಿ ತಿಳಿಸಲಾಗಿತ್ತು. ಆದರೂ ಸಹ ಹಲವು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವುದಿಲ್ಲ.
- ತರಗತಿ ಉಪನ್ಯಾಸಕರುಗಳ (Class Teachers) ಮುಖಾಂತರ ಕಡ್ಡಾಯವಾಗಿ ಶುಲ್ಕಮರುಭರಿಕೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ.
- ವಿದ್ಯಾರ್ಥಿಗಳು ಆಧಾರ್, ಮೊಬೈಲ್ ನಂಬರ್‌ಗಳನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡಿಕೊಳ್ಳಲು ಹಾಗೂ ಪದೇ ಪದೇ ಮೊಬೈಲ್ ನಂಬರ್‌ಗಳನ್ನು ಬದಲಾಯಿಸದಂತೆ ತಿಳುವಳಿಕೆ ನೀಡಲಾಗಿದೆ.
- ಬಿಸಿಎಂ ವಿದ್ಯಾರ್ಥಿಗಳಿಗೆ ಸರ್ಕಾರದಿಂದ Karnataka State Department of Agriculture (KSDA) ವತಿಯಿಂದ 168 ಹಾಗೂ Karnataka Building and Other Workers (ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ) ವತಿಯಿಂದ 16 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾಗಿರುತ್ತದೆ.

34.5, 35.5, 36.5: ಪದವಿ ಫಲಿತಾಂಶ ಉತ್ತಮಪಡಿಸುವುದು

ಹಿಂದಿನ ಸಭೆಯ ತೀರ್ಮಾನ

ಇತ್ತೀಚಿನ ದಿನಮಾನಗಳಲ್ಲಿ ಎಲ್ಲರೂ ಮೊಬೈಲ್ ಮೂಲಕ ಇಂಗ್ಲೀಷ್ ಕಲಿಯಬಹುದು. ಸ್ಪೋಕನ್ ಇಂಗ್ಲೀಷ್ ತರಗತಿಗಳನ್ನು ಪ್ರಾರಂಭಿಸುವ ಮೊದಲು ಇಂಗ್ಲೀಷ್ ಕಲಿಕೆ ಬಗ್ಗೆ ವಿಶೇಷ (ದೈನಂದಿನ ತರಗತಿಗಳು ಪ್ರಾರಂಭವಾಗುವ ಮೊದಲು) ತರಗತಿಗಳನ್ನು ನಡೆಸುವುದು. ಗುಂಪು ಮಾಡಿ ತರಗತಿಗಳನ್ನು ನಡೆಸುವುದು ಹಾಗೂ ಆನ್‌ಲೈನ್ ತರಗತಿಗಳನ್ನು ಕೇಳಲು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎಂದು ಡಾ. ಸಿ. ನಾಗಣ್ಣ ಹಾಗೂ ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.

- ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುವ ಬಹಳಷ್ಟು ಹಳೆಯ ವಿದ್ಯಾರ್ಥಿಗಳು ಚಾರ್ಟರ್ಡ್ ಅಕೌಂಟೆಂಟ್ ಪದವಿ ಮಾಡಿದ್ದು, ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಿ ಪ್ರಸಿದ್ಧಿಯಾಗಿರುತ್ತಾರೆ. ಇವರುಗಳನ್ನು ಕಾಲೇಜಿಗೆ ಕರೆಯಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಲು ಕ್ರಮವಹಿಸಬೇಕೆಂದು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.
- ಫಲಿತಾಂಶ ಉತ್ತಮವಾಗಿದೆ ಎಂದು ಇನ್ನೂ ಫಲಿತಾಂಶ ಉತ್ತಮಪಡಿಸಲು ಕ್ರಮವಹಿಸಬೇಕೆಂದು ನಿರ್ದೇಶಕರು ತಿಳಿಸಿದರು.
- Common Entrance ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕ್ರಮವಹಿಸಬೇಕೆಂದು ತಿಳಿಸಿದರು. ಹಾಗೂ Gold Medal ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲು ಕ್ರಮವಹಿಸಲು ತಿಳಿಸಿದರು.
- ಓದುವ ಮಕ್ಕಳಿಗೆ ಪೂರಕವಾದ ವಾತಾವರಣ ಮತ್ತು ಸೌಲಭ್ಯಗಳನ್ನು ದೊರಕಿಸಿಕೊಡಲು ಕ್ರಮಕೈಗೊಳ್ಳಲು ನಿರ್ದೇಶಕರು ಸಲಹೆ ನೀಡಿದರು.
- ಶೇ. 100ರಷ್ಟು ಫಲಿತಾಂಶ ಬಂದಿರುವ ವಿಷಯವನ್ನು ಪ್ರಚಾರ ಮಾಡಿ, ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿ ದಾಖಲಾತಿ ಉತ್ತಮಪಡಿಸಲು ಕ್ರಮವಹಿಸಬೇಕೆಂದು ನಿರ್ದೇಶಕರು ಸಲಹೆ ನೀಡಿದರು.
- ಪಿಯು ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಪರಿಚಯ ಮಾಡಿಕೊಟ್ಟು ದಾಖಲಾತಿ ಅಭಿವೃದ್ಧಿಪಡಿಸಲು ನಿರ್ದೇಶಕರು ತಿಳಿಸಿದರು.

ತೆಗೆದುಕೊಂಡಿರುವ ಕ್ರಮಗಳು

- ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಚಾರ್ಟರ್ಡ್ ಅಕೌಂಟೆಂಟ್ ಆಗಿ ಹೆಸರು ಮಾಡಿರುವವರನ್ನು ಕಾಲೇಜಿಗೆ ಕರೆಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕೊಡಿಸಲಾಗುವುದು.
- ಅಧ್ಯಾಪಕರ ಸಭೆ ಕರೆದು ಫಲಿತಾಂಶ ಉತ್ತಮಪಡಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಲಾಗಿದೆ.
- Common Entrance ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ತರಬೇತಿ ಕೊಡಿಸಲಾಗುತ್ತಿದೆ.

➢ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಪೂರಕವಾದ ವಾತವರಣವನ್ನು ಗ್ರಂಥಾಲಯ ಮತ್ತು ವಾಚನಾಲಯದಲ್ಲಿ ದೊರಕಿಸಿಕೊಡಲಾಗಿದೆ.

➢ ನಮ್ಮ ಕಾಲೇಜಿನಲ್ಲಿ ವ್ಯಾಸಂಗಮಾಡಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಮಾಹಿತಿಗಳನ್ನು ಪ್ರಚಾರ ಮಾಡಿ, ಪದವಿಪೂರ್ವ ವಿದ್ಯಾರ್ಥಿಗಳಿಗೆ ತಿಳಿಸುವ ಮುಖಾಂತರ ದಾಖಲಾತಿಯನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ.

**34.6, 35.6, 36.6: ಪೋಷಕರ ಸಭೆ ನಡೆಸುವುದು**

**ಹಿಂದಿನ ಸಭೆಯ ತೀರ್ಮಾನ**

❖ ಪ್ರಥಮ ಪದವಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಪೋಷಕರನ್ನು ಕರೆಯಿಸಿ ಅವರಿಗೆ ಪೋಷಕರ ಸಭೆ ನಡೆಸುವ ದಿನಾಂಕ ತಿಳಿಸಬೇಕೆಂದು ನಿರ್ದೇಶಕರು ತಿಳಿಸಿದರು. ಪೋಷಕರ ಸಭೆ ನಡಾವಳಿಗಳನ್ನು ಆಡಳಿತ ಮಂಡಳಿಗೆ ಕಳುಹಿಸಲು ತೀರ್ಮಾನಿಸಲಾಯಿತು.

**ತೆಗೆದುಕೊಂಡಿರುವ ಕ್ರಮಗಳು**

➢ ಸಭೆಯಲ್ಲಿ ತೀರ್ಮಾನಿಸಿರುವಂತೆ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪದವಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಪೋಷಕರುಗಳನ್ನು ಆಹ್ವಾನಿಸಿ ಸಭೆ ನಡೆಸಲು ಕ್ರಮಕೈಗೊಳ್ಳುತ್ತೇವೆ.

**34.7, 35.7, 36.7: ಗ್ರಂಥಾಲಯದಲ್ಲಿರುವ ಪುಸ್ತಕಗಳು, ನಿಯತಕಾಲಿಕೆಗಳು ಹಾಗೂ ದಿನಪತ್ರಿಕೆಗಳ ಮಾಹಿತಿ**

**ಹಿಂದಿನ ಸಭೆಯ ತೀರ್ಮಾನ**

❖ ಮಲ್ಟಿಪಲ್ ಪ್ರತಿಗಳನ್ನು ಖರೀದಿಸಲು ಡಾ. ಗೀತಾ ಮಹದೇವಪ್ರಸಾದ್‌ರವರು ತಿಳಿಸಿದರು.

❖ ಪ್ರೊ. ಎ.ಎಸ್ ಜಯರಾಮ್‌ರವರು ಬರೆದಿರುವ ಪುಸ್ತಕಗಳು ಗ್ರಂಥಾಲಯಕ್ಕೆ ಬಂದಿದೆಯೇ ಎಂದು ಪರಿಶೀಲಿಸಲು ನಿರ್ದೇಶಕರು ತಿಳಿಸಿದರು.

❖ ಕೊಡುಗೆಯಾಗಿ ಬಂದ ಪುಸ್ತಕಗಳನ್ನು ಪ್ರತ್ಯೇಕ ರ್‍ಯಾಕ್‌ಗಳಲ್ಲಿಟ್ಟು ಹೆಸರನ್ನು ಬರೆಸಲು ಕ್ರಮವಹಿಸಲು ಡಾ. ಸಿ. ನಾಗಣ್ಣ ರವರು ತಿಳಿಸಿದರು.

❖ ಕೊಡುಗೆಯಾಗಿ ಬಂದ ಪುಸ್ತಕಗಳ ವಿವರವನ್ನು ಗೌರ್ನಿಂಗ್ ಸಭೆಯ ಕಾರ್ಯಸೂಚಿಯಲ್ಲಿ ಸೇರಿಸಲು ನಿರ್ದೇಶಕರು ತಿಳಿಸಿದರು.

❖ ಇ-ಗ್ರಂಥಾಲಯ ವ್ಯವಸ್ಥೆ ಇದ್ದರೆ ಸರಿ, ಇಲ್ಲವಾದರೆ ಮಾಡಲು ನಿರ್ದೇಶಕರು ತಿಳಿಸಿದರು.

❖ ಪುಸ್ತಕಗಳ ಖರೀದಿ ವಿವರ ನೀಡಿದರೆ ಸಾಲದು ಇವುಗಳನ್ನು ವ್ಯಾಸಂಗ ಮಾಡಲು ವಿದ್ಯಾರ್ಥಿಗಳಿಗೆ ತಿಳಿಸಬೇಕೆಂದು ತಿಳಿಸಿದರು.

**ತೆಗೆದುಕೊಂಡಿರುವ ಕ್ರಮಗಳು**

➢ ಮಲ್ಟಿಪಲ್ ಪ್ರತಿಗಳನ್ನು 2022-23ನೇ ಶೈಕ್ಷಣಿಕ ಸಾಲಿನಲ್ಲಿ ಖರೀದಿಸಲು ಕ್ರಮಕೈಗೊಳ್ಳುತ್ತೇವೆ.

➢ ಕೊಡುಗೆಯಾಗಿ ಬಂದ ಪುಸ್ತಕಗಳನ್ನು ಪ್ರತ್ಯೇಕ ರ್‍ಯಾಕ್‌ಗಳಲ್ಲಿಟ್ಟು ಕ್ರಮಕೈಗೊಳ್ಳಲಾಗಿದೆ.

➢ ಕೊಡುಗೆಯಾಗಿ ಬಂದ ಪುಸ್ತಕಗಳ ವಿವರವನ್ನು ಗೌರ್ನಿಂಗ್ ಸಭೆಯ ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆ.

➢ ಇ-ಗ್ರಂಥಾಲಯ ವ್ಯವಸ್ಥೆ ಮಾಡುವಲ್ಲಿ ಅನುಮತಿಗಾಗಿ ಆಡಳಿತಮಂಡಳಿಗೆ ಪತ್ರ ಬರೆಯಲಾಗಿದೆ.

➢ ಖರೀದಿಸಿದ ಪುಸ್ತಗಳನ್ನು ವ್ಯಾಸಂಗ ಮಾಡಲು ತರಗತಿ ಉಪನ್ಯಾಸಕರ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಗುತ್ತಿದೆ.

ಗ್ರಂಥಾಲಯದಲ್ಲಿ ಪಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಿರುವ ವಿವರ ಕೆಳಕಂಡಂತಿದೆ.

| ವರ್ಷ | ಹಿಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯವರೆಗೆ ಇದ್ದ ಒಟ್ಟು ಪುಸ್ತಕಗಳು | ಹಿಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯ ನಂತರ ಖರೀದಿಸಿರುವ ಒಟ್ಟು ಪುಸ್ತಕಗಳು | ಒಟ್ಟು ಪುಸ್ತಕಗಳು | ಹಿಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯ ನಂತರ ಖರೀದಿಸಿರುವ ಒಟ್ಟು ಪುಸ್ತಕಗಳ ಮೌಲ್ಯ | ನಿಯತ ಕಾಲಿಕೆಗಳು | ದಿನ ಪತ್ರಿಕೆಗಳು |
|---|---|---|---|---|---|---|
| 2022-23 | 25,851 | 169 | 26,020 | 35,128.00 | 15+08=23 | 06 |

34.8, 35.8, 36.8: ಕಾರ್ಯಾಗಾರ/ಸೆಮಿನಾರ್‌ಗಳಲ್ಲಿ ಅಧ್ಯಾಪಕರುಗಳು ಪ್ರಬಂಧ ಮಂಡಿಸಿರುವ ಮಾಹಿತಿ

ಹಿಂದಿನ ಸಭೆಗಳ ತೀರ್ಮಾನ

- ❖ 6 ತಿಂಗಳ ಅವಧಿಯಲ್ಲಿ ಯಾರಾದರೂ ಪಿ.ಹೆಚ್‌ಡಿ ನೋಂದಾಯಿಸಿಕೊಂಡಿದ್ದು ಪ್ರಗತಿಯಾಗಿರುವ ಬಗ್ಗೆ ವಿಭಾಗವಾರು ಮಾಹಿತಿ ನೀಡಲು ಡಾ. ಸಿ. ನಾಗಣ್ಣರವರು ಸಲಹೆ ನೀಡಿದರು.
- ❖ ಕಾರ್ಯಸೂಚಿಯನ್ನು ಕನ್ನಡ ವಿಭಾಗದ ಮುಖ್ಯಸ್ಥರ ಗಮನಕ್ಕೆ ತಂದು ಪರಿಶೀಲಿಸಿ ಅಂತಿಮಗೊಳಿಸಲು ನಿರ್ದೇಶಕರು ಸಲಹೆ ನೀಡಿದರು.
- ❖ ವಿಭಾಗವಾರು ಕಾರ್ಯಗಾರ/ಸೆಮಿನಾರ್/ವೆಬಿನಾರ್‌ಗಳಲ್ಲಿ ಭಾಗವಹಿಸಿರುವ ಮಾಹಿತಿ ನೀಡಲು ನಿರ್ದೇಶಕರು ಸಲಹೆ ನೀಡಿದರು.
- ❖ ಎಲ್ಲಾ ಅಧ್ಯಾಪಕರುಗಳು ಕಾರ್ಯಗಾರ/ಸೆಮಿನಾರ್‌ಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಸಲಹೆ ನೀಡಿದರು.
- ❖ ಅಧ್ಯಾಪಕರ ಸಭೆ ಕರೆದು ಯಾವ ಕೋರ್ಸ್ ಪರಿಚಯಿಸಿದರೆ ದಾಖಲಾತಿ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಚರ್ಚಿಸಿ, ತೀರ್ಮಾನಿಸಿ ಆಡಳಿತ ಮಂಡಳಿಗೆ ವರದಿ ಸಲ್ಲಿಸಲು ತೀರ್ಮಾನಿಸಲಾಯಿತು.

ತೆಗೆದುಕೊಂಡಿರುವ ಕ್ರಮಗಳು

- ➢ ಹಿಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯಿಂದೀಚೆಗೆ ಯಾರು ಪಿ.ಹೆಚ್.ಡಿಗೆ ನೋಂದಣಿ ಮಾಡಿಸಿರುವುದಿಲ್ಲ.
- ➢ ಕಾರ್ಯಸೂಚಿಯನ್ನು ಕನ್ನಡ ವಿಭಾಗದ ಮುಖ್ಯಸ್ಥರ ಗಮನಕ್ಕೆ ತಂದು ಪರಿಶೀಲಿಸಿ ನಂತರ ಅಂತಿಮಗೊಳಿಸಲಾಗಿದೆ.
- ➢ ವಿಭಾಗವಾರು ಕಾರ್ಯಗಾರ/ಸೆಮಿನಾರ್/ವೆಬಿನಾರ್‌ಗಳಲ್ಲಿ ಅಧ್ಯಾಪಕರು ಭಾಗವಹಿಸಿರುವ ಮಾಹಿತಿಯನ್ನು ನೀಡಲಾಗಿದೆ.
- ➢ ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಅಧ್ಯಾಪಕರ ಸಭೆ ನಡೆಸಿ ಎಲ್ಲಾ ಅಧ್ಯಾಪಕರು ಕಾರ್ಯಗಾರ/ಸೆಮಿನಾರ್‌ಗಳಲ್ಲಿ ಕಡ್ಡಾಯವಾಗಿ ಭಾಗವಹಿಸಲು ತಿಳಿಸಲಾಗಿದೆ.
- ➢ ಮುಂದಿನ ವರ್ಷಗಳಲ್ಲಿ ಬಿ.ಸಿ.ಎ ಪ್ರಾರಂಭಿಸುವ ಬಗ್ಗೆ ಯೋಜನೆ ಹಾಕಿಕೊಂಡು ಆಡಳಿತ ಮಂಡಳಿ ಗಮನಕ್ಕೆ ತರಲಾಗಿದೆ.

34.9, 35.9,36.9: ಕಾಲೇಜು ಪ್ರಗತಿ ಪರಿಶೀಲನೆ

ಹಿಂದಿನ ಸಭೆಗಳ ತೀರ್ಮಾನ

- ❖ ಎಲ್ಲಾ ಅಧ್ಯಾಪಕರು ಪ್ರತಿ ಸೆಮಿಸ್ಟರ್‌ನಲ್ಲಿ ಎರಡು ಲೇಖನಗಳನ್ನು ಕಡ್ಡಾಯವಾಗಿ ಪ್ರಕಟಿಸಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ತೆಗೆದುಕೊಂಡಿರುವ ಕ್ರಮಗಳು

- ➢ ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಎಲ್ಲಾ ಅಧ್ಯಾಪಕರ ಸಭೆ ಕರೆದು ಪ್ರತಿ ಸೆಮಿಸ್ಟರ್‌ನಲ್ಲಿ ಎರಡು ಲೇಖನಗಳನ್ನು ಕಡ್ಡಾಯವಾಗಿ ಪ್ರಕಟಿಸಲು ತಿಳಿಸಲಾಗಿದೆ.

(ಅ) ಅಧ್ಯಾಪಕರುಗಳು ಪ್ರಬಂಧ ಮಂಡಿಸಿರುವ ವಿವರಗಳು

- ಡಾ. ಎನ್.ಎಂ. ಗಿರಿಜಾಪತಿ, ಕನ್ನಡ ಸಹಾಯಕ ಪ್ರಾಧ್ಯಾಪಕರು ಇವರ **'ಕೇಶಿರಾಜನ ಶಬ್ದಮಣಿ ದರ್ಪಣ'** ಸಮಗ್ರ ಸೂತ್ರಗಳ ಸಂಕಲನ ಕೃತಿಯು ಐ.ಬಿ.ಹೆಚ್ ಪ್ರಕಾಶನ, ಎನ್.ಆರ್. ಕಾಲೋನಿ, ಬೆಂಗಳೂರು–04 (ISBN: 788195-673353) ಇವರಿಂದ ಜೂನ್–2022 ರಲ್ಲಿ ಪ್ರಕಟಗೊಂಡಿದೆ.
- ಶ್ರೀ ಸಂಪತ್ತು, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರು **"Promotion of Accessible Tourism in India – Challenges"** (ISSN No-2277-4262 Factor: 8.244 Vol-11, Issue 05.05.2022) ವಿಷಯ ಕುರಿತ ಲೇಖನವು Shree Prakashan, Ambegaon, Pune-411046 ಯಲ್ಲಿ ಪ್ರಕಟಣೆ ಗೊಂಡಿರುತ್ತದೆ.

(ಆ) ವಿಚಾರ ಸಂಕಿರಣ/ಕಾರ್ಯಾಗಾರ/ಸಮ್ಮೇಳನ/ವೆಬಿನಾರ್‌ಗಳಲ್ಲಿ ಅಧ್ಯಾಪಕರುಗಳು ಭಾಗವಹಿಸಿರುವ ಮಾಹಿತಿ

| Sl. No. | Name and Designation | Title of Seminar/Workshop/ Conference/Webinar | Date | Place |
|---|---|---|---|---|
| 1 | **Jeevitha G S**<br>Asst. Prof. of Commerce | Five Day Workshop on **Learning Management System (LMS)** | 19.05.2022 To 23.05.2022 | JSS College, Ooty Road, Mysore |
| | **Shashikala H G**<br>Asst. Prof. of Economics | | | |
| 2 | **Dr. N.M Girijapathi**<br>Asst. Prof. of Kannada | Two Day National Level Webinar on **National Accreditation Process for Higher Education** | 20.06.2022 To 21.06.2022 | Institute for Academic Excellence (IAE), Himayathnagar, Hyderabad, Telangana |
| | **Manikanta C M**<br>Asst. Prof. of Commerce | | | |
| 3 | **Basavaraju M**<br>Asst. Prof. of Kannada | One Day National Level Workshop on **Linguistics and Translation** | 05.07.2022 | JSS College, Ooty Road, Mysore |
| | **Dr. N.M Girijapathi**<br>Asst. Prof. of Kannada | | | |
| 4 | **Siddamallikarjunaswamy H S**<br>Lecturer in Kannada | One Day Workshop on **Research Methodology** | 16.07.2022 | JSS Women's College, Chamarajanagara |
| | **Girish Kumar D B**<br>Librarian | | | |
| | **Sowmya K**<br>Asst. Prof. of Commerce | | | |

(ಇ) ವಿಶೇಷ ಉಪನ್ಯಾಸ ಕಾರ್ಯಕ್ರಮಗಳ ಮಾಹಿತಿ

- ದಿನಾಂಕ: 17.06.2022 ರಂದು ಅರ್ಥಶಾಸ್ತ್ರ ವಿಭಾಗದ ವತಿಯಿಂದ **'Condition of Education Health and Employment in Contemporary India'** ಎಂಬ ವಿಷಯ ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಎಸ್. ಷಣ್ಮುಖ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಹೇಮಗಂಗೋತ್ರಿ, ಹಾಸನ ಇವರು ಉಪನ್ಯಾಸ ನೀಡಿದರು.
- ದಿನಾಂಕ: 30.06.2022 ರಂದು ಕನ್ನಡ ವಿಭಾಗದ ವತಿಯಿಂದ **"ರನ್ನ ಕವಿಯ ಸಾಹಸ ಭೀಮ ವಿಜಯ"** ಎಂಬ ವಿಷಯ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಡಿ. ಪ್ರಭು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಣಿ ವಿಜ್ಞಾನ(ಸ್ವಾಯತ್ತ) ಮಹಾವಿದ್ಯಾಲಯ ಮೈಸೂರು ಇವರು ಉಪನ್ಯಾಸ ನೀಡಿದರು.
- ದಿನಾಂಕ: 30.06.2022 ರಂದು ಕನ್ನಡ ವಿಭಾಗದ ವತಿಯಿಂದ ಐಚ್ಛಿಕ ವಿದ್ಯಾರ್ಥಿಗಳಿಗಾಗಿ **"ಕನ್ನಡ ಜಗಲಿ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಡಾ. ಡಿ. ಪ್ರಭು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಣಿ ವಿಜ್ಞಾನ(ಸ್ವಾಯತ್ತ) ಮಹಾವಿದ್ಯಾಲಯ ಮೈಸೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

➢ ದಿನಾಂಕ: 30.06.2022 ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ **"ಚುನಾವಣಾ ಸುಧಾರಣೆಗಳು"** ಎಂಬ ವಿಷಯ ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀ ಎ.ಎಲ್. ರಾಜಶೇಖರ್, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಳ್ಳಿ ಇವರು ಉಪನ್ಯಾಸ ನೀಡಿದರು.

**(ಈ) ಅಧ್ಯಾಪಕರ ಸಾಧನೆ**

➢ ದಿನಾಂಕ: 29.07.2022 ರಿಂದ 11.08.2022 ರವರೆಗೆ ಮೈಸೂರಿನ ಯುಜಿಸಿ-ಹೆಚ್‌ಆರ್‌ಡಿಸಿ, ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ 48ನೇ ಕನ್ನಡ ವಿಭಾಗದ ಕಾರ್ಯಕ್ರಮದಲ್ಲಿ **'ಭಾಷೆ, ಸಮಾಜ ಮತ್ತು ಸಂಸ್ಕೃತಿ'** ವಿಷಯ ಕುರಿತು ನಡೆದ ಪುನಶ್ಚೇತನ ಶಿಬಿರದಲ್ಲಿ ಶ್ರೀ ಬಸವರಾಜು ಎಂ. ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರು ಭಾಗವಹಿಸಿದ್ದರು.

**(ಉ) ವಿದ್ಯಾರ್ಥಿಗಳ ಸಾಧನೆ**

➢ ದಿನಾಂಕ: 05.05.2022 ರಿಂದ 15.05.2022 ರವರೆಗೆ ಡೆಲ್ಲಿ ಪಬ್ಲಿಕ್ ಸ್ಕೂಲ್, ಮೈಸೂರು ಇವರು ಆಯೋಜಿಸಿದ್ದ ಸಿ.ಎ.ಟಿ.ಸಿ-1 ಕ್ಯಾಂಪ್‌ನಲ್ಲಿ ಕಾಲೇಜಿನ ಎನ್.ಸಿ.ಸಿ ಕೆಡೆಟ್‌ಗಳು ಭಾಗವಹಿಸಿದ್ದರು. ಸದರಿಯವರು ಆಯೋಜಿಸಿದ್ದ ಥ್ರೋ-ಬಾಲ್ ಸ್ಪರ್ಧೆಯಲ್ಲಿ ಕೆಳಕಂಡ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದಿದ್ದಾರೆ.

| ಕ್ರ. ಸಂ | ವಿದ್ಯಾರ್ಥಿ ಹೆಸರು ಮತ್ತು ತರಗತಿ | ಕ್ರ. ಸಂ | ವಿದ್ಯಾರ್ಥಿ ಹೆಸರು ಮತ್ತು ತರಗತಿ |
|---|---|---|---|
| 1 | ಕು. ರಕ್ಷಿತಾ ಟಿ.ಎಂ, ದ್ವಿತೀಯ ಬಿ.ಎ | 5 | ಕು. ಬಿಂದು ಬಿ.ಎಸ್, ದ್ವಿತೀಯ ಬಿ.ಎ |
| 2 | ಕು. ಯಶು, ದ್ವಿತೀಯ ಬಿ.ಎ | 6 | ಕು. ಬಿಂದು ಎಸ್, ದ್ವಿತೀಯ ಬಿ.ಎ |
| 3 | ಕು. ಸ್ಪಂದನಾ ಕೆ, ದ್ವಿತೀಯ ಬಿ.ಎ | 7 | ಕು. ಧನುಶ್ರೀ, ದ್ವಿತೀಯ ಬಿ.ಎ |
| 4 | ಕು. ಸುಚಿತ್ರ ಎನ್, ದ್ವಿತೀಯ ಬಿ.ಎ | 8 | ಕು ಯಶಸ್ವಿನಿ, ದ್ವಿತೀಯ ಬಿ.ಎ |

➢ ದಿನಾಂಕ: 12.07.2022ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲದಲ್ಲಿ **ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜ ವಲಯಮಟ್ಟದ ಮಹಿಳಾ ಕ್ರೀಡಾಕೂಟವನ್ನು** ಆಯೋಜಿಸಲಾಗಿತ್ತು. ನಮ್ಮ ಕಾಲೇಜಿನ 13 ವಿದ್ಯಾರ್ಥಿನಿಯರು ಥ್ರೋ-ಬಾಲ್, ಟೆನ್ನಿಕಾಯ್ಟ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಥ್ರೋ-ಬಾಲ್ ಸ್ಪರ್ಧೆಯಲ್ಲಿ 4ನೇ ಸ್ಥಾನವನ್ನು ಪಡೆದಿದ್ದಾರೆ.

➢ ದಿನಾಂಕ: 03.08.2022ರಂದು ರಾ.ಸೇ.ಯೋ. ಘಟಕದ ವತಿಯಿಂದ ಅಜಾದಿ-ಕ-ಅಮೃತ ಮಹೋತ್ಸವ ಕಾರ್ಯಕ್ರಮದ ಹಿನ್ನಲೆಯಲ್ಲಿ **"ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಘಟನೆಗಳು"** ಎಂಬ ವಿಷಯ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕು. ಕುಸುಮ, ದ್ವಿತೀಯ ಬಿ.ಎ ಮತ್ತು ಕು. ರಕ್ಷಿತಾ ಟಿ.ಎಂ, ದ್ವಿತೀಯ ಬಿ.ಎ ಇವರು ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

➢ ದಿನಾಂಕ: 04.08.2022 ರಂದು ರಾ.ಸೇ.ಯೋ. ಘಟಕದ ವತಿಯಿಂದ ಅಜಾದಿ-ಕ-ಅಮೃತ್ ಮಹೋತ್ಸವ ಪ್ರಯುಕ್ತ ಕಾಲೇಜಿನ ವಿದ್ಯಾರ್ಥಿಗಳಿಗೆ **"ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ"** ವಿಷಯ ಕುರಿತು ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ರಾಜು, ದ್ವಿತೀಯ ಬಿ.ಎ ಹಾಗೂ ಕುಸುಮ, ದ್ವಿತೀಯ ಬಿ.ಎ ಇವರು ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

➢ ದಿನಾಂಕ: 06.08.2022ರಂದು ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕುದೇರು ಇಲ್ಲಿ **ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜ ವಲಯಮಟ್ಟದ ಪುರುಷ ಕ್ರೀಡಾಕೂಟವನ್ನು** ಆಯೋಜಿಸಲಾಗಿತ್ತು. ನಮ್ಮ ಕಾಲೇಜಿನ 12 ವಿದ್ಯಾರ್ಥಿಗಳು ಬಾಲ್‌ಬ್ಯಾಡ್ಮಿಂಟನ್ ಮತ್ತು ಲ್ಯಾನ್ ಟೆನ್ನಿಸ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಎರಡು ವಿಭಾಗಗಳಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

➢ ದಿನಾಂಕ: 08.08.2022ರಂದು ಅಜಾದಿ-ಕ-ಅಮೃತ್ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು ಇಲ್ಲಿ ಆಯೋಜಿಸಿದ್ದ **ಜೆಎಸ್‌ಎಸ್ ಅಂತರ ಕಾಲೇಜು ಭಾಷಣ ಸ್ಪರ್ಧೆ, ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ** ನಮ್ಮ ಕಾಲೇಜಿನ 5 ವಿದ್ಯಾರ್ಥಿಗಳು ಭಾಗವಹಿಸಿ, ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಜು ಎಸ್, ದ್ವಿತೀಯ ಬಿ.ಎ ವಿದ್ಯಾರ್ಥಿ ಪ್ರಥಮ ಬಹುಮಾನ ಪಡೆದಿರುತ್ತಾರೆ.

➢ ದಿನಾಂಕ: 10.08.2022ರಂದು ಅಜಾದಿ-ಕ-ಅಮೃತ್ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ), ಸರಸ್ವತಿಪುರಂ, ಮೈಸೂರು ಇಲ್ಲಿ ಆಯೋಜಿಸಿದ್ದ **ಜೆಎಸ್‌ಎಸ್ ಅಂತರ ಕಾಲೇಜು ಸಮೂಹ ನೃತ್ಯ, ದೇಶಭಕ್ತಿ ಗೀತೆ ಹಾಗೂ ಚಿತ್ರಕಲೆ** ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ 25 ವಿದ್ಯಾರ್ಥಿಗಳು ಭಾಗವಹಿಸಿದ್ದರು.

1. ರಾಷ್ಟ್ರೀಯ ಹಬ್ಬಗಳು

- ದಿನಾಂಕ: 15.08.2022ರಂದು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಗುಂಡ್ಲುಪೇಟೆ ವತಿಯಿಂದ **'75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ'** ಕಾರ್ಯಕ್ರಮವನ್ನು ಆಚರಿಸಲಾಯಿತು.

2. ರಾಷ್ಟ್ರೀಯ ಸೇವಾ ಯೋಜನೆ

- ದಿನಾಂಕ: 01.08.2022ರಂದು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ **ಮೂಡಗೂರು ದತ್ತು ಗ್ರಾಮದಲ್ಲಿ ಸ್ವಯಂಸೇವಕರುಗಳಿಂದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಹಾಗೂ ಶ್ರಮದಾನ** ಕಾರ್ಯಕ್ರಮವನ್ನು ನಡೆಸಲಾಯಿತು.
- ದಿನಾಂಕ: 03.08.2022 ರಂದು ರಾಷ್ಟ್ರೀಯ ಸೇವಾ ಯೋಜನೆ ಘಟಕವು ಅಗತಗೌಡನಹಳ್ಳಿ ಗ್ರಾಮದಲ್ಲಿ ಜನರ ಜೀವನ ಮಟ್ಟ ಕುರಿತು ಉನ್ನತ್ ಭಾರತ್ ಅಭಿಯಾನ, ಮಾನವ ಸಂಪನ್ಮೂಲ ಇಲಾಖೆ, ಭಾರತ ಸರ್ಕಾರ ಇವರು ಕೇಳಿದ್ದ ವರದಿಯನ್ನು ಸಿದ್ಧಪಡಿಸಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಘಟಕದ ಇಪ್ಪತ್ತು ಸ್ವಯಂ ಸೇವಕರು ಸದರಿ ಸರ್ವೆ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದರು. ಹಾಗೂ ಸ್ವಯಂ ಸೇವಕರುಗಳು ಅದೇ ದಿನ ಗ್ರಾಮದ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ನಡೆಸಿದರು.

3. ಇತರೆ ಕಾರ್ಯಕ್ರಮಗಳು

- ದಿನಾಂಕ: 18.05.2022ರಂದು ಜೆಎಸ್‌ಎಸ್ ತಾಂತ್ರಿಕ ಮಹಾವಿದ್ಯಾಲಯ ಮತ್ತು ಎಸ್‌ಆರ್‌ಟಿಪಿ ಅಧಿಕಾರಿಗಳ ತಂಡವು ಕಾಲೇಜಿಗೆ ಭೇಟಿ ನೀಡಿ ಸೌರಸ್ಥಾವರವನ್ನು ಪರಿಶೀಲಿಸಿದರು. ಶ್ರೀ ಬಿ.ಆರ್. ಉಮಾಕಾಂತ್, ಜಂಟಿ ನಿರ್ದೇಶಕರು, ಜೆಎಸ್‌ಎಸ್ ತಾಂತ್ರಿಕ ಮಹಾವಿದ್ಯಾಲಯ, ಮೈಸೂರು ಹಾಗೂ ತಂಡ ಸೌರವಿದ್ಯುತ್‌ನಿಂದ ಅಪಾರವಾದ ಲಾಭವಿದ್ದು, ಪರಿಸರಸ್ನೇಹಿ ಹಾಗೂ ಇಂಗಾಲದ ಡೈ ಆಕ್ಸೈಡ್ ಕಡಿಮೆಯಾಗುವುದರ ಜೊತೆಗೆ ಹಸಿರು ಪರಿಣಾಮದ ಮೇಲೆ ಪ್ರಭಾವ ಬೀರುವ ಮೂಲಕ ಸಮಾಜದ ಆರೋಗ್ಯ ಸ್ವಾಸ್ಥ್ಯಕ್ಕೆ ನಾಂದಿಯಾಗುವ ಬಗ್ಗೆ ಮಾಹಿತಿಗಳನ್ನು ವಿವರಿಸಿದರು.
- ದಿನಾಂಕ: 31.05.2022ರಂದು ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ **'ವಿಶ್ವ ತಂಬಾಕು ರಹಿತ ದಿನಾಚರಣೆ'** ಪ್ರಯುಕ್ತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ **'ತಂಬಾಕು ಪರಿಸರಕ್ಕೆ ಮಾರಕ, ತಂಬಾಕು ಕ್ಯಾನ್ಸರ್ ರೋಗಕ್ಕೆ ಕಾರಣ, ಆರೋಗ್ಯವಾಗಿರಲು ತಂಬಾಕು ತ್ಯಜಿಸಿ'** ಎಂಬ ಘೋಷಣೆಯೊಂದಿಗೆ ಗುಂಡ್ಲುಪೇಟೆ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾವನ್ನು ನಡೆಸಲಾಯಿತು.
- ದಿನಾಂಕ 21.06.2022ರಂದು ಕ್ರೀಡಾ ವಿಭಾಗದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಎನ್‌ಸಿಸಿ ಸಹಯೋಗದೊಂದಿಗೆ **ವಿಶ್ವ ಯೋಗ ದಿನಾಚರಣೆಯನ್ನು** ಆಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಯೋಗಪಟು ಶ್ರೀ ರಮೇಶ್ ನಂಜನಗೂಡು, ಇವರು ಯೋಗಾಸನದ ಮಹತ್ವ ಹಾಗೂ ಯೋಗ ಪ್ರದರ್ಶನವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಹೆಚ್ ಪಿ ಬಸವರಾಜಪ್ಪ ಹಾಗೂ ಪ್ರೌಢ ಶಾಲೆ ಮುಖ್ಯೋಪಧ್ಯಾಯರಾದ ಶ್ರೀ ಮಹೇಶ್‌ರವರು ಭಾಗವಹಿಸಿದ್ದರು. ಕಾಲೇಜಿನ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು.
- ದಿನಾಂಕ: 06.06.2022ರಂದು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ **'ವಿಶ್ವ ಪರಿಸರ ದಿನಾಚರಣೆ'**ಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ **ಪರಿಸರದ ಅಳಿವು ಉಳಿವು** ಎಂಬ ವಿಷಯ ಕುರಿತು ಶ್ರೀ ಸಂಪತ್ತು, ಕಾರ್ಯಕ್ರಮಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಮುಖ್ಯಸ್ಥರು, ಇತಿಹಾಸ ವಿಭಾಗ ಇವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರು ವಹಿಸಿದ್ದರು, ಅಧ್ಯಾಪಕರು/ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.
- ದಿನಾಂಕ: 24.6.2022ರಂದು 2021-22ನೇ ಶೈಕ್ಷಣಿಕ ಸಾಲಿನ **'ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ'** ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ಎಂ.ಎನ್. ನಂದೀಶ್ ಹಂಚೆ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರು ನಮ್ಮ ಮಣ್ಣಿನ ಸಾಂಸ್ಕೃತಿಕ ಗುಣ ಮತ್ತದರ ಹಿರಿಮೆಯನ್ನು ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಮುರುಗೇಶಪ್ಪ, ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ಮರಿಸ್ವಾಮಪ್ಪ, ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿಯ ಸಂಚಾಲಕರು ಉಪಸ್ಥಿತರಿದ್ದರು. ಕಾಲೇಜಿನ ಅಧ್ಯಾಪಕರು/ಅಧ್ಯಾಪಕೇತರ ವರ್ಗದವರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

- ದಿನಾಂಕ: 25.06.2022ರಂದು ಗುಂಡ್ಲುಪೇಟೆ ತಾಲ್ಲೂಕು ಘಟಕದ ವತಿಯಿಂದ ಆಯೋಜಿಸಿದ್ದ **"ಅಮೃತ ಭಾರತಿಗೆ ಕನ್ನಡದ ಆರತಿ"** ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಭಾಗವಹಿಸಿದ್ದರು.
- ದಿನಾಂಕ: 11.07.2022ರಂದು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ **"ವಿಶ್ವ ಜನಸಂಖ್ಯಾ ದಿನಾಚರಣೆ"**ಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಡಾ. ಎಂ.ಎನ್. ಗಿರಿಜಾಪತಿ ಇವರು ಜನಸಂಖ್ಯಾ ಸಮತೋಲನದ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಾಪಕರು/ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.
- ದಿನಾಂಕ: 14.07.2022 ಮತ್ತು 15.07.2022ರಂದು **'ಪ್ರತಿಭಾನ್ವೇಷಣಾ'** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಂ.ಪಿ. ಸುನೀಲ್, ಕಾರ್ಯದರ್ಶಿಗಳು, ಜವಾಹರ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ ಇವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ಮರಿಸ್ವಾಮಪ್ಪ ವಹಿಸಿದ್ದರು. ಐಕ್ಯೂಎಸಿ ಸಂಚಾಲಕರಾದ ಡಾ. ಎಂ.ಎನ್. ಗಿರಿಜಾಪತಿ ಹಾಗೂ ಅಧ್ಯಾಪಕರು/ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.
- ದಿನಾಂಕ: 25.07.2022 ರಂದು ವಿಸ್ತರಿತ ಕಾರ್ಯಕೋಶದ ವತಿಯಿಂದ ಕೋವಿಡ್-19 ಲಸಿಕಾ ಅಭಿಯಾನದ ಪ್ರಯುಕ್ತ ಗುಂಡ್ಲಪೇಟೆ ತಾಲ್ಲೂಕು ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ನಮ್ಮ ಕಾಲೇಜಿಗೆ ಆಗಮಿಸಿ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಕೋವಿಡ್ 3ನೇ ಡೋಸ್ ಲಸಿಕೆಯನ್ನು ನೀಡಿದರು.
- ಉನ್ನತ್ ಭಾರತ್ ಅಭಿಯಾನದ ವತಿಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದಿನಾಂಕ: 27.07.2022 ರಂದು ಪುತ್ತನಪುರ ಗ್ರಾಮ, ದಿನಾಂಕ: 29.07.2022ರಂದು ಭೀಮನಬೀಡು ಗ್ರಾಮ, ದಿನಾಂಕ: 03.08.2022 ರಂದು ಅಗತಗೌಡನಹಳ್ಳಿ ಗ್ರಾಮಪಂಚಾಯಿತಿ ಹಾಗೂ ವ್ಯಾಪ್ತಿಯಲ್ಲಿನ ಹೆಗ್ಗಹಳ್ಳಿ ಮತ್ತು ಅಕ್ಕಲಪುರ ಗ್ರಾಮಗಳಲ್ಲಿ **"ಸರ್ಕಾರದ ಸವಲತ್ತುಗಳ ಅರಿವು ಮತ್ತು ಉಪಯೋಗಗಳ"** ಬಗ್ಗೆ ಸಾಮಾಜಿಕ ಹಾಗೂ ಆರ್ಥಿಕ ಸರ್ವೆ ಕಾರ್ಯವನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳನ್ನೊಳಗೊಂಡ ತಂಡವು ಗ್ರಾಮಗಳ ಮನೆಗಳನ್ನು ಸರ್ವೆ ಕಾರ್ಯಕ್ಕೆ ಒಳಪಡಿಸಿ ಮಾಹಿತಿ ಸಂಗ್ರಹಿಸಿದರು.
- ದಿನಾಂಕ: 12.08.2022 ರಂದು ಸಾಂಸ್ಕೃತಿಕ ವೇದಿಕೆ ವತಿಯಿಂದ 75ನೇ ಸ್ವಾತಂತ್ರ್ಯದ ಅಜಾದಿ-ಕ-ಅಮೃತ್ ಮಹೋತ್ಸವ ಪ್ರಯುಕ್ತ **"ಸಂಸ್ಕೃತ ಸಪ್ತಾಹ"** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಶಿವಣ್ಣ, ಉಪನ್ಯಾಸಕರು, ಸಂಸ್ಕೃತ ವಿಭಾಗ, ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಚಾಮರಾಜನಗರ ಇವರು ಉಪನ್ಯಾಸ ನೀಡಿದರು.
- ದಿನಾಂಕ: 12.08.2022ರಂದು ಎನ್‌ಸಿಸಿ ಘಟಕದ ವತಿಯಿಂದ 'International Youth Day' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- ದಿನಾಂಕ: 12-08-2022ರ ಶುಕ್ರವಾರದಂದು ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ಅಂತಿಮ ಬಿ.ಕಾಂ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **ಚಾಮುಲ್ ಪ್ಲಾಂಟ್**, ಕುದೇರು, ಚಾಮರಾಜನಗರ ಇಲ್ಲಿಗೆ ಕೈಗಾರಿಕಾ ಭೇಟಿಗೆ (Industrial Visit) ಕರೆದುಕೊಂಡು ಹೋಗಲಾಗಿತ್ತು.
- ದಿನಾಂಕ: 13-08-2022ರ ಶನಿವಾರ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ವತಿಯಿಂದ **"ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ"**ಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ಚಾಂದಿನಿ, ಗ್ರಂಥಪಾಲಕರು, ಎಸ್‌ಎನ್‌ಎಸ್ ನರ್ಸಿಂಗ್ ಕಾಲೇಜು, ಗುಂಡ್ಲುಪೇಟೆ ಇವರು ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲರಾದ ಶ್ರೀ ಮರಿಸ್ವಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಡಿ.ಬಿ. ಗಿರೀಶ್‌ಕುಮಾರ್ ಗ್ರಂಥಪಾಲಕರು ಉಪಸ್ಥಿತರಿದ್ದರು.

**37.4 ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ**

## 2021-22 ಮತ್ತು 2022-23 ನೇ ಸಾಲಿನ ವಿದ್ಯಾರ್ಥಿಗಳ ದಾಖಲಾತಿ ಹೋಲಿಕೆ ವಿವರ

| Course | Combination | Intake | 2021-22 No. of Admission | Combination | Intake | 2022-23 No. of Admission |
|---|---|---|---|---|---|---|
| I B.A | HEP | 90 | 25 | HP | 90 | 20 |
| | HEG | 90 | 22 | EG | 90 | 15 |
| | KEG/KEP | 60 | 7 | KG/KP | 60 | 07 |
| | Total | 240 | 54 | - | 240 | 42 |
| II B.A | HEP | 90 | 18 | - | - | - |
| | HEG | 90 | 30 | - | - | - |
| | KEG/KEP | 90 | 13 | - | - | - |
| | Total | 270 | 61 | - | - | - |
| III B.A | HEP | 90 | 15 | - | - | - |
| | HEG | 90 | 22 | - | - | - |
| | KEG/KEP | 90 | 11 | - | - | - |
| | Total | 270 | 48 | - | - | - |
| I B.Com | Compulsory Subjects | 120 | 95 | - | - | 68 |
| II B.Com | | 120 | 84 | - | - | - |
| III B.Com | | 120 | 111 | - | - | - |
| | Total | 360 | 290 | - | 240 | 68 |
| | Grand Total | 1140 | 453 | - | 240 | 110 |

| ಮಹಿಳಾ ವಸತಿನಿಲಯದ ದಾಖಲಾತಿ ವಿವರ | | | | |
|---|---|---|---|---|
| ಕ್ರ. ಸಂ. | ಪ್ರವೇಶ ಮಿತಿ | ತರಗತಿ | ದಾಖಲಾತಿ ಸಂಖ್ಯೆ 2021-22 | ದಾಖಲಾತಿ ಸಂಖ್ಯೆ 2022-23 |
| 1 | 45 | ವಿದ್ಯಾರ್ಥಿನಿಯರು | - | 03 |
| 2 | | ಉದ್ಯೋಗಸ್ಥ ಮಹಿಳೆಯರು | 10 | 09 |
| | | ಒಟ್ಟು | 10 | 12 |

# JSS COLLEGE OF ARTS & COMMERCE GUNDLUPET

## LIBRARY & INFORMATION CENTRE

## BOOK DETAILS

| SL. No. | SUBJECT | No. of Books | No. of Titles |
|---|---|---|---|
| 1 | Kannada | 5159 | 2895 |
| 2 | English | 2314 | 2021 |
| 3 | History | 2799 | 1049 |
| 4 | Economics | 3853 | 1232 |
| 5 | Political Science | 2979 | 1114 |
| 6 | Geography | 2290 | 1141 |
| 7 | Commerce | 4015 | 1342 |
| 8 | Computer Science & E-Commerce | 382 | 55 |
| 10 | General Books | 1935 | 1671 |
| 11 | Tourism & Hotel Management | 299 | 129 |
| **Total Books** | | **26020** | **12649** |
| 12 | Minor Research Project Report | 3 | 3 |
| 13 | Bounded Journals | 367 | - |
| 14 | CD's | 191 | - |
| 15 | Donated Books (2021-22 onwards) | 229 | 194 |

# JSS COLLEGE OF ARTS AND COMMERCE GUNDLUPET

## LIST OF JOURNALS

| Sl. No. | Name of the Journals |
|---|---|
| 1 | QJMS |
| 2 | Journal of Accounting & Finance |
| 3 | Journal of Management & Entrepreneurship |
| 4 | India Literature |
| 5 | South Asian Journal of Socio-Political Study |
| 6 | Yojana (English ) |
| 7 | Yojana (Kannada) |
| 8 | Kurukshethra(E) |
| 9 | Journal of Applied Economics |
| 10 | Geography of you |
| 11 | ಮಾನವಿಕ ಕರ್ನಾಟಕ |
| 12 | ಪ್ರಬುದ್ಧ ಕರ್ನಾಟಕ |
| 13 | Janata |
| 14 | Humanism |
| 15 | ಅರಹು-ಕುರುಹು |

## LIST OF MAGAZINES

| Sl. No | Name of the Magazines |
|---|---|
| 1 | Spardha Spporthi |
| 2 | Competition Success Review |
| 3 | Sparda Vijetha |
| 4 | Sparda Chanakya |
| 5 | The Week |
| 6 | Prathiyoitha Darpana |
| 7 | Udyogavarthe (K) |
| 8 | Out Look Traveler |

## NEWS PAPER

| Sl. No | List of News Papers |
|---|---|
| 1 | ಪ್ರಜಾವಾಣಿ |
| 2 | ವಿಜಯವಾಣಿ |
| 3 | ವಿಜಯಕರ್ನಾಟಕ |
| 4 | ಮೈಸೂರು ಮಿತ್ರ |
| 5 | Indian Express |
| 6 | Deccan Herald |

# JSS COLLEGE OF ARTS & COMMERCE, GUNDLUPET-571111

## Results of BA/B.Com Degree (Odd Semester) Examination held during the year March/April-2022

| SL.No | Class | No. of Students Appeared | No. of Students Pass | Percentage |
|---|---|---|---|---|
| 1 | I BA I Semester | 89 | Result awaited | |
| 2 | II BA III Semester | 61 | 52 | **85.24** |
| 3 | III BA V Semester | 47 | 45 | **95.74** |
| 1 | I B.Com I Semester | 48 | Result awaited | |
| 2 | II B.Com II Semester | 79 | 68 | **86.07** |
| 3 | III B.Com V Semester | 111 | 96 | **86.48** |

## II BA III Semester - Subject wise Result March/April-2022

| SL. No | Subjects | No. of Students Appeared | No. of Students Pass | Percentage |
|---|---|---|---|---|
| 1 | Kannada | 61 | 59 | 96.72 |
| 2 | English | 61 | 54 | 88.52 |
| 3 | Economics | 61 | 55 | 90.16 |
| 4 | History | 48 | 47 | 97.91 |
| 5 | Political Science | 18 | 18 | 100 |
| 6 | Geography | 42 | 41 | 97.61 |
| 7 | Kannada-III (Optional) | 13 | 12 | 92.3 |

## II BA V Semester - Subject wise Result March/April-2022

| SL. No | Subjects | No. of Students Appeared | No. of Students Pass | Percentage |
|---|---|---|---|---|
| 1 | History | 40 | 39 | 97.5 |
| 2 | Economics | 47 | 46 | 97.87 |
| 3 | Geography | 28 | 27 | 96.42 |
| 4 | Political Science | 15 | 15 | 100 |
| 5 | Kannada-III (Optional) | 11 | 11 | 100 |


# ಕಾಲೇಜಿನಲ್ಲಿ ನಡೆದಿರುವ ಕಾರ್ಯಕ್ರಮಗಳ ಫೋಟೋಗಳು



ದಿನಾಂಕ: 18.05.2022 ರಂದು ಅಧಿಕಾರಿಗಳ ತಂಡವು ಕಾಲೇಜಿಗೆ ಭೇಟಿ ನೀಡಿ ಸೌರ ಸ್ಥಾವರವನ್ನು ಪರಿಶೀಲಿಸಿದರು.




ದಿನಾಂಕ: 31.05.2022ರಂದು ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ **'ವಿಶ್ವ ತಂಬಾಕು ರಹಿತ ದಿನಾಚರಣೆ'**




ದಿನಾಂಕ: 06.06.2022ರಂದು ರಾ.ಸೇ.ಯೋ. ಮತ್ತು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ **'ವಿಶ್ವ ಪರಿಸರ ದಿನಾಚರಣೆ'**



ದಿನಾಂಕ: 17.06.2022ರಂದು ಅರ್ಥಶಾಸ್ತ್ರ ವಿಭಾಗದ ವತಿಯಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ




ದಿನಾಂಕ 21.06.2022ರಂದು ಕ್ರೀಡಾ ವಿಭಾಗದ ವತಿಯಿಂದ ರಾ. ಸೇ. ಯೋ. & ಎನ್‌ಸಿಸಿ ಸಹಯೋಗದೊಂದಿಗೆ **ವಿಶ್ವ ಯೋಗ ದಿನಾಚರಣೆಯನ್ನು** ಆಯೋಜಿಸಲಾಗಿತ್ತು.



ದಿನಾಂಕ: 25.06.2022 ರಂದು **"ಅಮೃತ ಭಾರತಿಗೆ ಕನ್ನಡದ ಆರತಿ"** ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕರು/ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು



ದಿನಾಂಕ: 30.06.2022 ರಂದು ಕನ್ನಡ ವಿಭಾಗದ ವತಿಯಿಂದ **ವಿಶೇಷ ಉಪನ್ಯಾಸ** ಕಾರ್ಯಕ್ರಮ




ದಿನಾಂಕ: 30.06.2022 ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ **"ಚುನಾವಣಾ ಸುಧಾರಣೆಗಳು"** ವಿಶೇಷ ಉಪನ್ಯಾಸ ಕಾರ್ಯಕ್ರಮ



ದಿನಾಂಕ: 11.07.2022 ರಂದು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ **"ವಿಶ್ವ ಜನಸಂಖ್ಯಾ ದಿನಾಚರಣೆ"** ವಿಶೇಷ ಉಪನ್ಯಾಸ ಕಾರ್ಯಕ್ರಮ




ದಿನಾಂಕ: 25.07.2022 ರಂದು Extension Activiteis Cell ವತಿಯಿಂದ **ಕೋವಿಡ್-19 ಲಸಿಕಾ** ಅಭಿಯಾನ ಕಾರ್ಯಕ್ರಮ




ದಿನಾಂಕ: 27, 28 ಜುಲೈ-2022 ಮತ್ತು 03 ಆಗಸ್ಟ್-2022 ರ ದಿನಗಳಂದು ಉನ್ನತ್ ಭಾರತ್ ಅಭಿಯಾನ್ ವತಿಯಿಂದ ಭೀಮನಬೀಡು, ಪುತ್ತನಪುರ, ಅಗತನಗೌಡನಹಳ್ಳಿ, ಹೆಗ್ಗಡಹಳ್ಳಿ ಮತ್ತು ಅಕ್ಕಲಪುರ ಗ್ರಾಮಗಳಲ್ಲಿ ಸಮೀಕ್ಷೆ ಕಾರ್ಯಕ್ರಮ




ದಿ: 01.08.2022 ರಂದು ರಾ. ಸೇ. ಯೋ. ಘಟಕದ ವತಿಯಿಂದ ಮೂಡಗೂರು (ದತ್ತು ಗ್ರಾಮ) ಗ್ರಾಮದಲ್ಲಿ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿತ್ತು.




ದಿ: 03.08.2022 ರಂದು ರಾ. ಸೇ. ಯೋ. ಘಟಕದ ವತಿಯಿಂದ ಅಜಾದಿ ಕ ಅಮೃತ ಮಹೋತ್ಸವ್ ಪ್ರಯುಕ್ತ "ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಘಟನೆಗಳು" ವಿಷಯ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.




ದಿ: 06.08.2022 ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜ ವಲಯಮಟ್ಟದ ಪುರುಷ ಕ್ರೀಡಾಕೂಟದಲ್ಲಿ ನಮ್ಮ ವಿದ್ಯಾರ್ಥಿಗಳು ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.




ದಿನಾಂಕ: 12.08.2022 ರಂದು ಸಾಂಸ್ಕೃತಿಕ ವೇದಿಕೆ ವತಿಯಿಂದ 75ನೇ ಸ್ವಾತಂತ್ರ್ಯದ ಅಜಾದಿ ಕಾ ಅಮೃತ್ ಮಹೋತ್ಸವ ಪ್ರಯುಕ್ತ **"ಸಂಸ್ಕೃತ ಸಪ್ತಾಹ"** ಕಾರ್ಯಕ್ರಮ



ದಿನಾಂಕ: 15-08-2022ರಂದು ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು, ಗುಂಡ್ಲುಪೇಟೆ ವತಿಯಿಂದ 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.




ದಿ: 06.08.2022 ರಂದು ನಡೆದ ಮೈಸೂರು **ವಿಶ್ವವಿದ್ಯಾನಿಲಯದ ಚಾಮರಾಜ ವಲಯಮಟ್ಟದ ಮಹಿಳಾ ಕ್ರೀಡಾಕೂಟದಲ್ಲಿ** ನಮ್ಮ ವಿದ್ಯಾರ್ಥಿಗಳು 4ನೇ ಸ್ಥಾನವನ್ನು ಪಡೆದಿರುತ್ತಾರೆ.




ದಿ: 12.08.2022 ರಂದು ಎನ್.ಸಿ.ಸಿ. ಘಟಕದ ವತಿಯಿಂದ **'International Youth Day'** ಕಾರ್ಯಕ್ರಮ



ದಿನಾಂಕ: 12-08-2022ರಂದು ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ **ಚಾಮುಲ್ ಪ್ಲಾಂಟ್, ಕುದೇರು, ಚಾಮರಾಜನಗರ** ಇಲ್ಲಿಗೆ ಅಂತಿಮ ಬಿ.ಕಾಂ ವಿದ್ಯಾರ್ಥಿಗಳಿಂದ Industrial Visit

**ಪ್ರಾಚಾರ್ಯರು**
**ಜೆ ಎಸ್ ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು**
**ಗುಂಡ್ಲುಪೇಟೆ - 571 111**

ಅನುಬಂಧ-1.

# ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ–571 111

## ದಿನಾಂಕ: 28.03.2022 ರಂದು ಬೆಳಗ್ಗೆ 11.00 ಗಂಟೆಗೆ ನಡೆದ 36ನೇ ಗೌರ್ನಿಂಗ್ ಕೌನ್ಸಿಲ್ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು

(1) **ಪ್ರೊ. ಮೊರಬದ ಮಲ್ಲಿಕಾರ್ಜುನ**
ನಿರ್ದೇಶಕರು
ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ

(2) **ಡಾ. ಗೀತಾ ಮಹದೇವಪ್ರಸಾದ್**
ಮಾಜಿ ಸಚಿವರು

(3) **ಡಾ. ಸಿ. ನಾಗಣ್ಣ**
ಆಂಗ್ಲಭಾಷಾ ಪ್ರಾಧ್ಯಾಪಕರು (ನಿವೃತ್ತ)
ಮೈಸೂರು ವಿಶ್ವವಿದ್ಯಾನಿಲಯ

(4) **ಶ್ರೀ ಬಸಪ್ಪ ದೇವರು**
ಅಧ್ಯಕ್ಷರು
ಶರಣ ಸಾಹಿತ್ಯ ಪರಿಷತ್
ಗುಂಡ್ಲುಪೇಟೆ

(5) **ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿ**
ಪ್ರಾಧ್ಯಾಪಕರು
ಗಣಕವಿಜ್ಞಾನ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ

(6) **ಶ್ರೀ ಮರಿಸ್ವಾಮಪ್ಪ**
ಪ್ರಾಚಾರ್ಯರು

(7) **ಶ್ರೀ ಪ್ರಭುಸ್ವಾಮಿ ಬಿ**
ಹಿರಿಯ ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ

ಸಭೆಗೆ ಹಾಜರಾಗಲು ಸಾಧ್ಯವಾಗದವರು

(1) **ಡಾ. ಸಿ.ಜಿ. ಬೆಟಸೂರಮಠ**
ಕಾರ್ಯನಿರ್ವಾಹಕ ಕಾರ್ಯದರ್ಶಿಗಳು
ಜೆಎಸ್‌ಎಸ್ ಮಹಾವಿದ್ಯಾಪೀಠ

(2) **ಶ್ರೀ ಸಿ.ಎಸ್. ನಿರಂಜನ್ ಕುಮಾರ್**
ಶಾಸಕರು
ಗುಂಡ್ಲುಪೇಟೆ

ಪೂರ್ವ ನಿಯೋಜಿತ ಕಾರ್ಯಕ್ರಮದಂತೆ ಅಧ್ಯಕ್ಷರು ಸಭೆಗೆ ಹಾಜರಾಗಲು ಸಾಧ್ಯವಾಗದುದರಿಂದ **ಪ್ರೊ. ಮೊರಬದ ಮಲ್ಲಿಕಾರ್ಜುನ**, ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

**36.1 ಸ್ವಾಗತ**

ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪರವರು ಸಭೆಯಲ್ಲಿದ್ದ ಎಲ್ಲರನ್ನು ಸ್ವಾಗತಿಸಿದರು.

**36.2 ಹಿಂದಿನ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು**

ದಿನಾಂಕ: 31.08.2021 ರಂದು ನಡೆದ 35ನೇ ಗೌರ್ನಿಂಗ್ ಕೌನ್ಸಿಲ್ ಸಭೆಯ ನಡವಳಿಗಳ ತಿದ್ದುಪಡಿ ಸಂಬಂಧ ಯಾರಿಂದಲೂ ಸಲಹೆ ಸೂಚನೆಗಳು ಬಂದಿಲ್ಲದಿರುವುದನ್ನು ಪ್ರಾಂಶುಪಾಲರು ಸಭೆಯ ಗಮನಕ್ಕೆ ತಂದು ಒಪ್ಪಿಗೆ ಪಡೆದು ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

**36.3 ಹಿಂದಿನ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆ**

**33.3, 34.3, 35.3: ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ಬಗ್ಗೆ**

**ಹಿಂದಿನ ಸಭೆಯ ತೀರ್ಮಾನ**

2021-22ನೇ ಶೈಕ್ಷಣಿಕ ಸಾಲಿನ ತರಗತಿಗಳು ಪ್ರಾರಂಭವಾದ ನಂತರ ಆಡಳಿತ ಮಂಡಳಿ ಅನುಮತಿ ಪಡೆದು ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸಲು ಸಭೆ ಸೂಚಿಸಿತು.

**ತೆಗೆದುಕೊಂಡಿರುವ ಕ್ರಮಗಳು**

2021-22ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸುವ ಸಂಬಂಧ ಆಡಳಿತ ಮಂಡಳಿ ಪತ್ರ ಸಂಖ್ಯೆ: ಸಿಇಡಿ-IV/PF/MJP/2012-13 ದಿನಾಂಕ: 17.12.2021 ರಲ್ಲಿ ಅನುಮತಿ ಪಡೆಯಲಾಗಿದೆ. ಈ ಸಂಬಂಧ ದಿನಾಂಕ: 27.12.2021 ರಂದು ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಲು ಪ್ರಕಟಣೆ ಹೊರಡಿಸಲಾಗಿದೆ. ಸದರಿ ಕೋರ್ಸ್‌ಗೆ ಪ್ರಥಮ ಬಿ.ಕಾಂ 52 ವಿದ್ಯಾರ್ಥಿಗಳು ಶುಲ್ಕ ಪಾವತಿಸಿರುತ್ತಾರೆ. ಇನ್ನು 102 ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕಾಗಿರುತ್ತದೆ. ಆದ್ದರಿಂದ 2ನೇ ಸೆಮಿಸ್ಟರ್ ತರಗತಿಗಳು ಪ್ರಾರಂಭವಾದ ನಂತರ ಬ್ಯಾಚ್‌ಗಳನ್ನು ಮಾಡಿ ತರಗತಿಗಳನ್ನು ನಡೆಸಲಾಗುವುದು.

**ತೀರ್ಮಾನ**

ವಿದ್ಯಾರ್ಥಿಗಳಿಂದ ತುರ್ತಾಗಿ ಶುಲ್ಕ ವಸೂಲಿ ಮಾಡಿ ತರಗತಿಗಳನ್ನು ನಡೆಸಲು ಯೋಜನೆ ರೂಪಿಸಿಕೊಂಡು ಸಮಯದ ಮಿತಿ ಹಾಕಿಕೊಂಡು ತರಗತಿಗಳನ್ನು ನಡೆಸಲು ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠರವರು ಸಲಹೆ ನೀಡಿದರು. ಉಳಿಕೆ 102 ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಿ ತರ್ತಾಗಿ ಮುಂದಿನ ಸೆಮಿಸ್ಟರ್‌ನಲ್ಲಿ ತರಗತಿಗಳನ್ನು ನಡೆಸಲು ಸಭೆ ತೀರ್ಮಾನಿಸಿತು.

## 33.4, 34.4, 35.4: ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುವ ಬಿಸಿಎಂ ವಿದ್ಯಾರ್ಥಿಗಳ ಶುಲ್ಕ

### ಹಿಂದಿನ ಸಭೆಯ ತೀರ್ಮಾನ

ಸರ್ಕಾರದಿಂದ ಮಂಜೂರಾಗಬೇಕಾಗಿರುವ ಅರ್ಹರಿರುವ ಬಿ.ಸಿ.ಎಂ., ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೂ ಶುಲ್ಕ ಮತ್ತು ವಿದ್ಯಾರ್ಥಿವೇತನ ಮಂಜೂರು ಮಾಡಿಸಲು ಹೆಚ್ಚಿನ ಗಮನ ಹರಿಸಿ ಎಲ್ಲರಿಗೂ ಮಂಜೂರು ಮಾಡಿಸಲು ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.

### ತೆಗೆದುಕೊಂಡಿರುವ ಕ್ರಮಗಳು

2020-21ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 403 ಅರ್ಹ ಬಿ.ಸಿ.ಎಂ. ವಿದ್ಯಾರ್ಥಿಗಳಲ್ಲಿ 326 ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಇವರಲ್ಲಿ 190 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೇರವಾಗಿ ಅವರ ಆನ್‌ಲೈನ್ ಬ್ಯಾಂಕ್ ಖಾತೆಗೆ ಜಮೆ ಆಗಿರುತ್ತದೆ. ಸದರಿ ಸಾಲಿನಲ್ಲಿ ಹಲವು ವಿದ್ಯಾರ್ಥಿಗಳು ಕೋವಿಡ್-19 ಇದ್ದುದರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. E-Attestation Officer ಗಳ Login ನಲ್ಲೆ ಉಳಿಸಿಕೊಂಡು E-Attestation ಆಗಿರುವುದಿಲ್ಲ. ಆದ್ದರಿಂದ ಕೆಲವು ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಬಂದಿರುವುದಿಲ್ಲ.

2021-22ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 375 ಅರ್ಹ ಬಿ.ಸಿ.ಎಂ. ವಿದ್ಯಾರ್ಥಿಗಳಲ್ಲಿ 270 ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ಸಾಲಿನಲ್ಲಿ ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 31-03-2022 ರವರೆಗೆ ಕಾಲಾವಕಾಶವಿದೆ ಎಂದು ಪ್ರಾಚಾರ್ಯರು ಸಭೆಗೆ ತಿಳಿಸಿದರು.

### ತೀರ್ಮಾನ

- ಪ್ರಸಕ್ತ ಸಾಲಿನಲ್ಲಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು 31 ಮಾರ್ಚ್ 2022 ಕಡೆಯ ದಿನವಾಗಿದೆ. ತುರ್ತಾಗಿ ಕ್ರಮವಹಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಶುಲ್ಕ ಮರುಭರಿಕೆಯಾಗಲು ಅನುಕೂಲ ಮಾಡಿಕೊಡಬೇಕೆಂದು ನಿರ್ದೇಶಕರು ತಿಳಿಸಿದರು.
- ಎಲ್ಲಾ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಶುಲ್ಕ ಮಂಜೂರು ಮಾಡಿಸಿ ಆರ್ಥಿಕ ಅನುಕೂಲವನ್ನು ಕಾಲೇಜಿನಿಂದ ಮಾಡಿಕೊಡಲು ಕ್ರಮವಹಿಸಲು ನಿರ್ದೇಶಕರು ತಿಳಿಸಿದರು.
- ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುತ್ತಿರುವ ಹಿನ್ನಲೆ ನಿಮಗೆ ತಿಳಿದಿದೆ. ವಿದ್ಯಾರ್ಥಿಗಳಿಗೆ ಸದರಿ ವಿಷಯದ ಬಗ್ಗೆ ಮಾರ್ಗದರ್ಶನ ನೀಡಿ ಎಲ್ಲರಿಗೂ ಶುಲ್ಕ ಮರುಭರಿಕೆ ಮಾಡಿಸಲು ಕಡ್ಡಾಯವಾಗಿ ಅಧ್ಯಾಪಕರುಗಳನ್ನು ನಿಯೋಜಿಸಿ ಕ್ರಮವಹಿಸಲು ನಿರ್ದೇಶಕರು ಸಲಹೆ ನೀಡಿದರು.
- ವಿದ್ಯಾರ್ಥಿಗಳಿಂದ ಆಗುವ ತಪ್ಪುಗಳಾದ ಆಧಾರ್, ಮೊಬೈಲ್ ನಂಬರ್ ಬದಲಾಯಿಸಬಾರದಂತೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಬೇಕೆಂದು ಹಾಗೂ ಸದರಿ ಕೆಲಸಗಳನ್ನು Follow up ಮಾಡಲು ಡಾ. ಹೆಚ್.ಎಸ್ ನಾಗೇಂದ್ರಸ್ವಾಮಿಯವರು ಸಲಹೆ ನೀಡಿದರು.

## 33.5, 34.5, 35.5: ಪದವಿ ಫಲಿತಾಂಶ ಉತ್ತಮಪಡಿಸುವುದು

### ಹಿಂದಿನ ಸಭೆಯ ತೀರ್ಮಾನ

ಪ್ರೀತಿಯಿಂದ ವಿದ್ಯಾರ್ಥಿಗಳ ಮನವೊಲಿಸಿ ಆಂಗ್ಲಭಾಷೆ ಫಲಿತಾಂಶವನ್ನು ಉತ್ತಮಪಡಿಸಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನವಾಗಿತ್ತು. ದಾಖಲಾತಿ ಕಡಿಮೆ ಇದ್ದರೂ ಫಲಿತಾಂಶ ಉತ್ತಮಪಡಿಸಲು ಸಾಧ್ಯವಾಗಿಲ್ಲ. ಉತ್ತಮ ಫಲಿತಾಂಶ ಬಂದರೆ ದಾಖಲಾತಿ ತಾನಾಗಿಯೇ ಅಭಿವೃದ್ಧಿಯಾಗುತ್ತದೆಂದು ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ತಿಳಿಸಿದರು.

**ತೆಗೆದುಕೊಂಡಿರುವ ಕ್ರಮಗಳು**

ಪೋಷಕರ ಸಭೆ ಕರೆದು ತಮ್ಮ ಮಕ್ಕಳಿಗೆ ವ್ಯಾಸಂಗಕ್ಕೆ ಹೆಚ್ಚು ಕಾಲವಕಾಶ ನೀಡಲು ತಿಳಿಸಲಾಗಿದೆ. ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು, ಪ್ರಶ್ನೆ ಪತ್ರಿಕೆಗಳ ಪುನರಾವರ್ತನೆ ಮಾಡುವ ಮೂಲಕ ಫಲಿತಾಂಶ ಉತ್ತಮಪಡಿಸಲು ಕ್ರಮಕೈಗೊಳ್ಳಲಾಗಿದೆ.

**ತೀರ್ಮಾನ**

ಇತ್ತೀಚಿನ ದಿನಮಾನಗಳಲ್ಲಿ ಎಲ್ಲರೂ ಮೊಬೈಲ್ ಮೂಲಕ ಇಂಗ್ಲೀಷ್ ಕಲಿಯಬಹುದು. ಸ್ಪೋಕನ್ ಇಂಗ್ಲೀಷ್ ತರಗತಿಗಳನ್ನು ಪ್ರಾರಂಭಿಸುವ ಮೊದಲು ಇಂಗ್ಲೀಷ್ ಕಲಿಕೆ ಬಗ್ಗೆ ವಿಶೇಷ ತರಗತಿ ನಡೆಸಲು ದೈನಂದಿನ ತರಗತಿಗಳು ಪ್ರಾರಂಭವಾಗುವ ಮೊದಲು ಈ ತರಗತಿಗಳನ್ನು ನಡೆಸುವುದು. ಗುಂಪು ಮಾಡಿ ತರಗತಿಗಳನ್ನು ನಡೆಸುವುದು ಹಾಗೂ ಆನ್‌ಲೈನ್ ತರಗತಿಗಳನ್ನು ಕೇಳಲು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎಂದು ಡಾ. ಸಿ. ನಾಗಣ್ಣ ಹಾಗೂ ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.

- ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುವ ಬಹಳಷ್ಟು ಹಳೆಯ ವಿದ್ಯಾರ್ಥಿಗಳು CA ಮಾಡಿದ್ದು, ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಿ ಪ್ರಸಿದ್ಧಿಯಾಗಿದ್ದು, ಇವರುಗಳನ್ನು ಕಾಲೇಜಿಗೆ ಕರೆಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಲು ಕ್ರಮವಹಿಸಬೇಕೆಂದು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.
- ಫಲಿತಾಂಶ ಉತ್ತಮವಾಗಿದೆ ಎಂದು ಇನ್ನೂ ಫಲಿತಾಂಶ ಉತ್ತಮಪಡಿಸಲು ಕ್ರಮವಹಿಸಬೇಕೆಂದು ನಿರ್ದೇಶಕರು ತಿಳಿಸಿದರು.
- Common Entrance ಪರೀಕ್ಷೆ ಎದುರಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕ್ರಮವಹಿಸಬೇಕೆಂದು ತಿಳಿಸಿದರು. ಹಾಗೂ Gold Medal ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲು ಕ್ರಮವಹಿಸಲು ತಿಳಿಸಿದರು.
- ಓದುವ ಮಕ್ಕಳಿಗೆ ಪೂರಕವಾದ ವಾತಾವರಣ ಮತ್ತು ಸೌಲಭ್ಯಗಳನ್ನು ದೊರಕಿಸಿಕೊಡಲು ಕ್ರಮಕೈಗೊಳ್ಳಲು ನಿರ್ದೇಶಕರು ಸಲಹೆ ನೀಡಿದರು.
- ಶೇ. 100 ರಷ್ಟು ಫಲಿತಾಂಶ ಬಂದಿರುವ ವಿಷಯವನ್ನು ಪ್ರಚಾರ ಮಾಡಿ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿ ದಾಖಲಾತಿ ಉತ್ತಮಪಡಿಸಲು ಕ್ರಮವಹಿಸಬೇಕೆಂದು ನಿರ್ದೇಶಕರು ಸಲಹೆ ನೀಡಿದರು.
- ಪಿಯು ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಪರಿಚಯ ಮಾಡಿಕೊಟ್ಟು ದಾಖಲಾತಿ ಅಭಿವೃದ್ಧಿಪಡಿಸಲು ನಿರ್ದೇಶಕರು ತಿಳಿಸಿದರು.

**33.6, 34.6, 35.6: ಪೋಷಕರ ಸಭೆ ನಡೆಸುವುದು**

**ಹಿಂದಿನ ಸಭೆಯ ತೀರ್ಮಾನ**

- ದಿನಾಂಕ: 26.08.2021 ರಂದು ಪೋಷಕರ ಸಭೆ ನಡೆಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾತಿ ಇರಲಿಲ್ಲ. ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮಕ್ಕಳು ಮತ್ತು ಪೋಷಕರನ್ನು ಸಂಸ್ಥಾಪಕರ ದಿನಾಚರಣೆ ನಡೆದಾಗ ಕಾಲೇಜಿನ ವತಿಯಿಂದ ಸನ್ಮಾನಿಸಲಾಗುವುದೆಂದು ಪ್ರಾಚಾರ್ಯರು ಸಭೆಗೆ ತಿಳಿಸಿದರು.
- Student Induction ಕಾರ್ಯಕ್ರಮ ನಡೆಸಿದಾಗ ಪೋಷಕರನ್ನು ಆಹ್ವಾನಿಸಿದರೆ ಇಲ್ಲಿನ ವ್ಯವಸ್ಥೆ ಬಗ್ಗೆ ಮನವರಿಕೆ ಮಾಡಲು ಅನುಕೂಲವಾಗುತ್ತದೆಂದು ನಿರ್ದೇಶಕರು ತಿಳಿಸಿದರು.

- H -

**ತೆಗೆದುಕೊಂಡಿರುವ ಕ್ರಮಗಳು**

- ಕೋವಿಡ್-19 ರ ಹಿನ್ನಲೆಯಲ್ಲಿ ಸಂಸ್ಥಾಪಕರ ದಿನಾಚರಣೆ ಸರಳವಾಗಿ ಆಚರಣೆ ಮಾಡಲಾಯಿತು. ಆದ್ದರಿಂದ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮಕ್ಕಳು ಮತ್ತು ಪೋಷಕರನ್ನು ಆಹ್ವಾನಿಸಲು ಸಾಧ್ಯವಾಗಿಲ್ಲ.
- 2022-23ನೇ ಶೈಕ್ಷಣಿಕ ಸಾಲಿನಲ್ಲಿ ನಡೆಯುವ Student Induction ಕಾರ್ಯಕ್ರಮ ನಡೆಸಿದಾಗ ಪೋಷಕರನ್ನು ಆಹ್ವಾನಿಸಲಾಗುವುದು.
- ದಿನಾಂಕ: 05.03.2022 ರಂದು ಪೋಷಕರ ಸಭೆಯನ್ನು ನಡೆಸಲಾಗಿದೆ. ಕಾರ್ಯಕ್ರಮಕ್ಕೆ ಗುಂಡ್ಲುಪೇಟೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರಾದ ಶ್ರೀ ರವೀಂದ್ರರವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಇವರು ಮಾತಾನಾಡುತ್ತಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಬ್ಯಾಂಕಿನ ವಿವಿಧ ಸೇವೆಗಳ ಬಗ್ಗೆ ಸಲಹೆ ನೀಡಿದರು. ಪೋಷಕರು ತಮ್ಮ ಅಭಿಪ್ರಾಯದಲ್ಲಿ ಸಂಸ್ಥೆಯ ಬಗ್ಗೆ ಹಾಗೂ ಕಾಲೇಜಿನ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು. 145 ವಿದ್ಯಾರ್ಥಿ ಪೋಷಕರು ಹಾಜರಿದ್ದರು.

  ಈ ಕಾಲೇಜಿನಲ್ಲಿ ಒಳ್ಳೆಯ ಬೋಧನಾಂಗವಿದ್ದು ಉತ್ತಮ ರೀತಿಯ ಪಾಠಗಳು ನಡೆಯುತ್ತಿವೆ. ಇದರಿಂದ ನಮ್ಮ ಮಕ್ಕಳಿಗೆ ಒಳ್ಳೆಯದಾಗಿದೆ ಎಂದು ಕು. ವಿಸ್ಮಯ ಪ್ರಥಮ ಬಿ.ಎ ವಿದ್ಯಾರ್ಥಿನಿಯ ತಂದೆ ಶ್ರೀ ವಿಶ್ವನಾಥ್, ಮಡಹಳ್ಳಿ ರವರು ತಿಳಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಗತಿಗಳನ್ನು ನಡೆಸುತ್ತಿರುವುದು ತುಂಬಾ ಒಳ್ಳೆಯ ಬೆಳವಣಿಗೆ ಎಂದು ತಿಳಿಸಿದರು. ಇಂಗ್ಲೀಷ್ ಭಾಷೆ ಕಲಿಕೆಗೆ ಹೆಚ್ಚು ಒತ್ತು ನೀಡಬೇಕೆಂದು ತಿಳಿಸಿದರು. ಕಾಲೇಜಿನಲ್ಲಿ ಸಮವಸ್ತ್ರಗಳನ್ನು ಜಾರಿಗೆ ತರಬೇಕೆಂದು ಪೋಷಕರು ಅಭಿಪ್ರಾಯಪಟ್ಟರು.

ತೀರ್ಮಾನ

ಪ್ರಥಮ ಪದವಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಪೋಷಕರನ್ನು ಕರೆಯಿಸಿ ಅವರಿಗೆ ಪೋಷಕರ ಸಭೆ ನಡೆಸುವ ದಿನಾಂಕ ತಿಳಿಸಬೇಕೆಂದು ನಿರ್ದೇಶಕರು ತಿಳಿಸಿದರು. ಪೋಷಕರ ಸಭೆ ನಡವಳಿಗಳನ್ನು ಆಡಳಿತ ಮಂಡಳಿಗೆ ಕಳುಹಿಸಲು ತೀರ್ಮಾನಿಸಲಾಯಿತು.

**33.7 , 34.7, 35.7: ಗ್ರಂಥಾಲಯದಲ್ಲಿರುವ ಪುಸ್ತಕಗಳು, ನಿಯತಕಾಲಿಕೆಗಳು ಹಾಗೂ ದಿನಪತ್ರಿಕೆಗಳ ಮಾಹಿತಿ**

**ಹಿಂದಿನ ಸಭೆಯ ತೀರ್ಮಾನ**

- ವಿದ್ಯಾರ್ಥಿಗಳು ಹೆಚ್ಚು ಪಠ್ಯ ಪುಸ್ತಕಗಳನ್ನು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಧಿಸಿದ ಪುಸ್ತಕಗಳನ್ನು ವ್ಯಾಸಂಗ ಮಾಡಲು ತಿಳುವಳಿಕೆ ನೀಡಬೇಕೆಂದು ತೀರ್ಮಾನಿಸಲಾಯಿತು.
- ಅಧ್ಯಾಪಕರು ತರಗತಿಗಳಿಗೆ ಹೋಗುವಾಗ ಪರಮಾರ್ಶನ ಗ್ರಂಥಗಳನ್ನು ತೆಗೆದುಕೊಂಡು ಹೋಗಿ, ವಿದ್ಯಾರ್ಥಿಗಳಿಗೆ ತೋರಿಸಿ ಸದರಿ ಪುಸ್ತಕಗಳನ್ನು ವ್ಯಾಸಂಗ ಮಾಡಲು ತಿಳಿಸಬೇಕೆಂದು ನಿರ್ದೇಶಕರು ಮತ್ತು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿ ರವರು ತಿಳಿಸಿದರು.

**ತೆಗೆದುಕೊಂಡಿರುವ ಕ್ರಮಗಳು**

- ಅಧ್ಯಾಪಕರುಗಳು ತರಗತಿಗಳಲ್ಲಿ ಪಠ್ಯಕ್ಕೆ ಸಂಬಂಧಿಸಿದ ಬೇರೆ ಬೇರೆ ಲೇಖಕರು ಬರೆದಿರುವ ಪುಸ್ತಕಗಳನ್ನು ವ್ಯಾಸಂಗ ಮಾಡಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ವ್ಯಾಸಂಗ ಮಾಡಲು ತಿಳಿಸುತ್ತಿದ್ದಾರೆ.
- ಅಧ್ಯಾಪಕರು ತರಗತಿಗಳಿಗೆ ಹೋಗುವಾಗ ಪರಾಮಾರ್ಶನ ಗ್ರಂಥಗಳನ್ನು ತೆಗೆದುಕೊಂಡು ಹೋಗಿ, ವಿದ್ಯಾರ್ಥಿಗಳಿಗೆ ತೋರಿಸಿ ಸದರಿ ಪುಸ್ತಕಗಳನ್ನು ವ್ಯಾಸಂಗ ಮಾಡಲು ತಿಳಿಸಿದ್ದಾರೆ.

- ಶ್ರೀಮತಿ ಜಯಶೀಲಾ ಎಂ.ಎನ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರು **"ಡಾ. ಸಿದ್ದಲಿಂಗಯ್ಯನವರ ಏಕಲವ್ಯ ನಾಟಕ – ಒಂದು ಸಮೀಕ್ಷೆ"** ವಿಷಯ ಕುರಿತ ಸಂಶೋಧನಾ ಲೇಖನವು International Journal of Kannada Research, New Delhi (ISSN: 2454-5813-Impact Factor: RJIF 4.89) ರಲ್ಲಿ ಪ್ರಕಟಣೆಗೊಂಡಿರುತ್ತದೆ.
- ಶ್ರೀ ಎನ್. ಮಲ್ಲುಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕರು ಇವರು **"Role of Psychological Factors in the Achievement of A Champion"** ವಿಷಯ ಕುರಿತ ಲೇಖನವು ನವೆಂಬರ್-2021 Multidisciplinary National Conference (ISBN: 978-81-945326-0-6)ರಲ್ಲಿ ಪ್ರಕಟಣೆಗೊಂಡಿರುತ್ತದೆ.
- ಶ್ರೀ ಪ್ರಭುಸ್ವಾಮಿ ಬಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರು **"Mixed Economy is a Mixture of Capitalism and Socialism – A Study"** ವಿಷಯ ಕುರಿತ ಲೇಖನವು International Journal of Recent Advanced in Multidisciplinary Topics Volume-2, Issue 12, December-2021 (ISSN 2582-7839) (Online) ರಲ್ಲಿ ಪ್ರಕಟಣೆಗೊಂಡಿರುತ್ತದೆ.
- ಶ್ರೀ ಮರಿಸ್ವಾಮಪ್ಪ, ಪ್ರಾಂಶುಪಾಲರು ಇವರು **"Human Geography as an Interdisciplinary Field-an Assessment"** ವಿಷಯ ಕುರಿತ ಲೇಖನವು International Journal of Recent Advances in Multidisciplinary (manuscript Number: IJRAMT-232) ರಲ್ಲಿ ಪ್ರಕಟಣೆಗೊಂಡಿರುತ್ತದೆ.
- ಶ್ರೀ ಮರಿಸ್ವಾಮಿ ಟಿ.ಎಂ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರು **"Changing Business Strategies amidst Growing Competition-A Study"** ವಿಷಯ ಕುರಿತ ಲೇಖನವು International Journal of Advances in Engineering and Management (IJAEM) (ISSN No-2395-5252, Impact Factor: 7.429) ರಲ್ಲಿ ಪ್ರಕಟಣೆಗೊಂಡಿರುತ್ತದೆ.

**ತೀರ್ಮಾನ**

- ಎಲ್ಲಾ ಅಧ್ಯಾಪಕರು ಪ್ರತಿ ಸೆಮಿಸ್ಟರ್‌ನಲ್ಲಿ ಎರಡು ಲೇಖನಗಳನ್ನು ಕಡ್ಡಾಯವಾಗಿ ಪ್ರಕಟಿಸಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ಸದಸ್ಯರುಗಳ ಸಲಹೆಗಳು**

- ದಾಖಲಾತಿ ಕಡಿಮೆಯಿದ್ದು ಪ್ರಗತಿ ಮಾಡಲು ನಿರ್ದೇಶಕರು ತಿಳಿಸಿದರು.
- ಸಂಸ್ಥೆಗೆ ನಷ್ಟವಾಗದಂತೆ ನಡೆಸಿಕೊಂಡು ಹೋಗಲು ಪ್ರಯತ್ನಪಡಬೇಕೆಂದು ನಿರ್ದೇಶಕರು ತಿಳಿಸಿದರು.
- ಪ್ರಸಕ್ತ ಸಾಲಿನಲ್ಲಿ ಪ್ರಥಮ ಬಿ.ಎ KG ಕೋರ್ಸ್‌ನಲ್ಲಿ ಕೇವಲ 07 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಇದರ ಬಗ್ಗೆ ಪರಾಮಾರ್ಶೆ ಮಾಡಿ ದಾಖಲಾತಿ ಅಭಿವರಧ್ಧಿಪಡಿಸಲು ಕ್ರಮಕೈಗೊಳ್ಳಲು ಸಲಹೆ ನೀಡಿದರು.
- ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಬಗ್ಗೆ ಮಾಹಿತಿ ನೀಡಬೇಕು ಹಾಗೂ ಎಷ್ಟು ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ ಎಂಬ ವಿವರವನ್ನು ನೀಡಲು ತಿಳಿಸಿದರು.
- ಹಳೆಯ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಗ್ರಹಿಸಿ, ಕಾಲೇಜಿಗೆ ಇವರಿಂದ ಏನಾದರು ಪ್ರಗತಿಯಾಗಿದೆಯೆ ಮತ್ತು ಸದರಿ ವಿದ್ಯಾರ್ಥಿಗಳ ನೋಂದಣಿ ನಿರ್ವಹಿಸಿರುವ ಬಗ್ಗೆ ಹಾಗೂ ಕಾರ್ಯಕ್ರಮಗಳನ್ನು ನಡೆಸಿರುವ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ನಿರ್ದೇಶಕರು ತಿಳಿಸಿದರು.
- Placement ಮಾಹಿತಿ, ವಿದ್ಯಾರ್ಥಿಗಳು ಪದವಿ ಮುಗಿಸಿದ ನಂತರ ಕೆಲಸಕ್ಕೆ ಸೇರಿದ ಬಗ್ಗೆ, ಉನ್ನತ

ವ್ಯಾಸಂಗಕ್ಕೆ ಎಲ್ಲಿ ಪ್ರವೇಶ ಪಡೆದಿದ್ದಾರೆ, ಎಂಬುದರ ಮಾಹಿತಿಯನ್ನು ಸಂಗ್ರಹಿಸಿ ನೀಡಲು ನಿರ್ದೇಶಕರು ತಿಳಿಸಿದರು.

- ಸ್ನಾತಕೋತ್ತರ ಪದವಿಯ ಯಾವುದಾದರು ವಿಷಯದ ಕೋರ್ಸ್ ಪ್ರಾರಂಭಿಸುವ ಬಗ್ಗೆ ಚರ್ಚಿಸಿ ಆಡಳಿತ ಮಂಡಳಿಗೆ ವರದಿ ನೀಡುವ ಬಗ್ಗೆ ನಿರ್ದೇಶಕರು ತಿಳಿಸಿದರು.
- ಪದವಿ ಮುಗಿಸಿದ ನಂತರ ವಿದ್ಯಾರ್ಥಿಗಳು ನಮ್ಮದೇ ಸ್ನಾತಕೋತ್ತರ ಸೆಂಟರ್‌ಗಳಿಗೆ ದಾಖಲಾಗಿದ್ದಾರೆಯೇ ಎಂಬುದರ ಬಗ್ಗೆ ಮಾಹಿತಿ ಸಿದ್ದಪಡಿಸಲು ನಿರ್ದೇಶಕರು ತಿಳಿಸಿದರು. ಹಾಗೂ ಪದವಿಪೂರ್ವ ಕಾಲೇಜಿನಿಂದ ಪದವಿ ವಿಭಾಗಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಿ ವರದಿ ನೀಡಲು ನಿರ್ದೇಶಕರು ತಿಳಿಸಿದರು.
- ಬಸ್‌ಸ್ಟಾಂಡ್ ವೃತ್ತದಲ್ಲಿ ಜೆಎಸ್‌ಎಸ್ ಕಾಲೇಜು ನಾಮಫಲಕವನ್ನು ಬರೆಸಿ ಹಾಕಿಸಲು ನಿರ್ದೇಶಕರು ತಿಳಿಸಿದರು.
- ಕಾಲೇಜು ವೆಬ್‌ಸೈಟ್ ಮೂಲಕ ಪ್ರಚಾರ ಮಾಡಲು ಡಾ. ಹೆಚ್.ಎಸ್ ನಾಗೇಂದ್ರಸ್ವಾಮಿಯವರು ತಿಳಿಸಿದರು.

**ವಂದನಾರ್ಪಣೆ:** ಶ್ರೀ ಪ್ರಭುಸ್ವಾಮಿ ಬಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರ ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.